I also suggest that all the C.D. Block areas must be served by the Seed Farms. This is not done at all. Only a few blocks have got seed farms and their annual production is very little. When we ask the Block Officers, they say that seeds are given to neighbouring land owners and they are expected to produce these seeds and distribute to the farmers. This is not the correct step. Unless all the seed required by the agriculturists is produced in the Farms, it is not possible to meet the demand. The production can also be increased without much difficulty. So I would suggest that every C.D. Block must be served by seed farm and seed store.

Then I come to fisheries. I am afraid we have not touched even the fringe of the problem in this matter. Last year I had an occasion to speak on the subject of fisheries at length and I do not wish to repeat what I said last year. But I would say that we are wasting huge resources which are available at our very door. The Arabian Sea is a vast reservoir of fish; it is a bigger reservoir than the Bay of Bengal. In order to assess the fish potential, investigations have been made by foreigners, but we have no done anything in the matter. A survey and chartering of the whole area is very necessary. Now we have got a few ports on the West Coast, in Mangalore, Malpe and Karwar, 10 or 15 ports each of which fetches 3-4 tons of fish. This is not tackling the problem at all. Food deficit can be met by catching more fish and distributing the same all over the State and having a planned

sort of progress for the whole State. In the budget we have set apart Rs. 3,000 for fishing harbours. 'Fishing harbours' is a big name, but the amount is only 3,000. For the ice cold storage plant at Mangalore, the provision is only Rs. one lakh. Is it possible to have any good progress with this allotment? It is stated that some progress is made at Bhatkal and Coondapur. We have got 22 ports in our State. Some sort of arrangement must be made to see that whatever fish is got, it is properly preserved and distributed. The distributing system also should be overhauled.

Sri M. C. NARASIMHAN.—The schemes of development of ports will have to be approved by the Centre.

Sri GAJANAN PANDIT.—The fishing harbours are dealt with by the State and not by the Centre. If the State wants help from the Centre, they can ask for it and the Centre is probably willing to give, even technical assistance.

Then with regard to approach fishery roads, there is a scheme costing Rs. 28 lakhs which was prepared three years back, but nothing seems to have been done except in having the scheme sanctioned. There is no progress. I wish the Government would look into the matter and see that all these approach roads are developed.

Coming to Forests, we have got 18 per cent of the area under Forest and our revenue is about Rs. 5 crores. I would say that this area be further developed, especially with the development of teak forests. We have got about 30,000 acres of teak in North Kanara District and another 30,000 acres in Coorg and Mysore and a small acreage in South Kanara. Every encouragement must be given to people to grow teak on areas where it is possible to grow teak and on darkhast lands. It is for the Government to encourge these people by remitting the assessment for 5,6 or 7 years to come. This is only symbolic; after all this is very little, but this sort of encouragement should be given to these agriculturists to grow teak which is a valuable timber. Mysore teak is famous all over India and every encouragement must be given for the growing of teak. I wouldearnestly request the Government to see that proper seedlings are provided and the technical know-how is given to the agriculturists so that they plant these trees and look after them can and see that the wealth of the country is increased.

Then regarding animal husbandry, I would suggest that great attention be paid to our district to imporve the cattle. On account of very heavy rainfall and poor type of fodder in our district our cattle are of very poor quality. It is very necessary that the quality of the cattle should be improved by having more artificial insemination centres all over the district and teaching the people how to rear good quality of cattle so that the milk content is increased. In fact, as against 5 pounds of milk that is consumed by an individual in India, in foreign countries 60-80 pounds are consumed by an individual. You can imagine to what extent progress has been made in foreign countries in this direction. So I would earnestly request the Government to see that this problem is tackled effectively.

One more thing, that is about production of arecanut. We produce 30-40 thousand tons annually and I would request that great encouragement be given to the production of acreanut.

ಶ್ರೀ ಎಚ್. ವಿ. ವೀರೇಗೌಡ (ಮಳವಳ್ಳಿ).—ಮಾನ್ಯ ಸಭಾಪತಿಗಳೇ ಈಗ ನಮ್ಮ ಮುಂದಿರತಕ್ಕ ವ್ಯವಸಾಯ, ಅರಣ್ಯ, ಪಶುವೈದ್ಯ ಮತ್ತು ಸಹಕಾರ ಶಾಖೆಗಳ ಡಿಮ್ಯಾಂಡುಗಳನ್ನು ಅನುಮೋದಿಸುತ್ತಾ ಈ ಸಂದರ್ಭದಲ್ಲಿ ಕೆಲವು ಸೂಚನೆಗಳನ್ನು ಕೊಡ ಬಯಸುತ್ತೇನೆ. ಈ ದಿವಸ ಈ ವಿಷಯಗಳ ಮೇಲೆ ಈಗಾಗಲೇ ಅನೇಕ ಮಾನ್ಯ ಸ್ನೇಹಿತರುಗಳು ಮಾತನಾಡಿದ್ದಾರೆ. ಅವರೆಲ್ಲರೂ ಹಾಗೆ ಮಾತನಾಡುವಾಗ ವ್ಯವಸಾಯದ ಇಲಾಖೆಗೆ ಸಾಕಷ್ಟು ಹಣವನ್ನೊದಗಿಸಿಲ್ಲವೆಂದು ಹೇಳಿದ್ದಾರೆ. ಆದರೆ ಈ ಡಿಮ್ಯಾಂಡ್‌ಗಳ ಮೇಲೆಲ್ಲ ಚರ್ಚೆಯಾಗತಕ್ಕ ಕಾಲದಲ್ಲಿ ಹೀಗೇ ಪ್ರತಿಯೊಂದು ಡಿಮ್ಯಾಂಡಿಗೂ ಸಾಕಷ್ಟು ಹಣವನ್ನೊದಗಿಸಿರುವುದಿಲ್ಲವೆಂದು ಹೇಳುವುದು ವಾಡಿಕೆಯಾಗಿ ಬಂದಿರುತ್ತೆ. ಆದರೆ ಒದಗಿಸಿರುವ ಹಣ ಸರಿಯಾಗಿ ವೆಚ್ಚವಾಗಿರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನಾವು ಪರಿಶೀಲಿಸಬೇಕಾದ್ದು ಅತ್ಯಗತ್ಯ. ಸರ್ಕಾರದವರು ಪ್ರತ್ಯಕ್ಷವಾಗಿ ಈ ಬಾಬುಗಳಿಗೆ ಒದಗಿಸಿರುವ ಮೊಬಲಗು ಇಷ್ಟೇ ಇರುವುದಾದರೂ ಅಪ್ರತ್ಯಕ್ಷವಾಗಿ ಹೆಚ್ಚಿನ ಮೊಬಲಗನ್ನು ಈ ವ್ಯವಸಾಯದ ಬಾಬಿಗೆ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಈ ದಿವಸ

(ಶ್ರೀ ಎಚ್. ವಿ. ವೀರೇಗೌಡ)

ಸರ್ಕಾರವವರು ದೊಡ್ಡ ದೊಡ್ಡ ನೀರಾವರಿ ಬಾಬುಗಳಿಗೆ ಹಾಗೂ ಬಾವಿಗಳಿಗೆ ಖರ್ಚುಮಾಡುತ್ತಿರುವ ಹಣವೆಲ್ಲ ಈ ವ್ಯವಸಾಯಾಭಿವೃದ್ಧಿಗೇ ಹೊರತು ಮತ್ತೆ ಯಾವುದಕ್ಕೆ ? ಆದರೆ ನಾವು ಈ ದಿವಸ ಈ ನಾನಾ ಬಾಬುಗಳಿಗೆ ಮಂಜೂರು ಮಾಡಿಕೊಡುತ್ತಿರುವ ಹಣ ಸರಿಯಾಗಿ ಖರ್ಚಾಗುತ್ತಿದೆಯೋ ಅಥವಾ ಇಲ್ಲವೇ ಎನ್ನುವುದನ್ನು ನಾವು ಅಷ್ಟು ಗಮನಿಸದಿರುವುದೂ ಮತ್ತು ನಾವು ಖರ್ಚು ಮಾಡತಕ್ಕ ಹಣಕ್ಕೆ ಸರಿಯಾದ ಒಂದು ಪ್ರತಿಫಲ ನಮಗೀದಿವಸ ದೊರೆಯುತ್ತಿದೆಯೇ ಅಥವಾ ಇಲ್ಲವೇ ಎಂಬುದರ ಕಡೆಗೆ ಗಮನ ಕೊಡದಿರುವುದು ಬಹಳ ವಿಷಾದಕರ.

ಖರ್ಚು ಮಾಡತಕ್ಕಂಥ ದುಡ್ಡು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿದೆಯೇ, ಅದರ ಪ್ರಯೋಜನ ರೈತನಿಗೆ ದೊರೆಯುತ್ತಿದೆಯೇ, ಖರ್ಚಾಗತಕ್ಕಂಥ ದುಡ್ಡಿನಿಂದ ಸರ್ಕಾರಕ್ಕೆ ಸಾಕಷ್ಟು ಪ್ರತಿಫಲ ಬರುತ್ತಿದೆಯೇ ಅನ್ನತಕ್ಕಂಥ ವಿಷಯದಲ್ಲಿ ಸಾಕಷ್ಟು ನಿಗಾ ಇಲ್ಲ, ಮೇಲ್ವಿಚಾರಣೆ ಇಲ್ಲವೆಂದು ಇಷ್ಟು ಹೇಳಬಹುದು. ಇದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು ಮತ್ತು ಖರ್ಚು ಮಾಡುತ್ತಿರುವ ಹಣದಿಂದ ಒಳ್ಳೆಯದಾಗುತ್ತಿದೆಯೇ ಎನ್ನುವುದನ್ನು ನೋಡಬೇಕು.

ಮಾನ್ಯ ವ್ಯವಸಾಯ ಸಚಿವರು ವ್ಯವಸಾಯ ಖಾತೆಯನ್ನು ಹೊಸದಾಗಿ ತೆಗೆದುಕೊಂಡ ಮೇಲೆ, ಈ ಇಲಾಖೆಯಲ್ಲಿರತಕ್ಕಂಥ ಲೋಪದೋಷಗಳನ್ನು ತೊಡೆದುಹಾಕಲು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ರೈತರ ಮುಖಂಡರುಗಳನ್ನೂ ಅಧಿಕಾರಿಗಳನ್ನೂ ಅನೇಕ ಕಡೆಗಳಲ್ಲಿ ಸೇರಿಸಿ, ವಿಚಾರ ವಿನಿಮಯ ಮಾಡಿ, ಏನೇನು ತೊಂದರೆಗಳು ರೈತರಿಗೆ ಇವೆಯೋ, ಅವುಗಳ ವಿಚಾರದಲ್ಲಿ ಸ್ಪಾಟಿನಲ್ಲಿಯೇ ಡಿಸೈಡ್ ಮಾಡುತ್ತಿದ್ದಾರೆಂದು ಹೊಗಳಿ ಪೇಪರಿನಲ್ಲಿ ಬಂದಿರುತ್ತದೆ. ಶ್ರೀ ರಾಚಯ್ಯನವರು ಒಂದೆರಡು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮಗಳನ್ನು ಮಾಡಿದ್ದಾರೆಂದು ಕೇಳಿದೆ. ಆದರೆ ನಮ್ಮ ಜಿಲ್ಲೆಗೆ ಇನ್ನೂ ಬರುವುದರಲ್ಲಿಯೇ ಇದ್ದಾರೆ. ಅವರು ಯಾವಾಗ ಬರುತ್ತಾರೋ ಗೊತ್ತಿಲ್ಲ.

ಸಾಕಷ್ಟು ದುಡ್ಡನ್ನು ಸರ್ಕಾರದವರು ವ್ಯವಸಾಯ ಇಲಾಖೆಗೆ ಖರ್ಚು ಮಾಡುತ್ತಿದ್ದರೂ, ಅದರ ಪ್ರಯೋಜನ ರೈತರಿಗೆ ತಲುಪುತ್ತಿಲ್ಲ ಎಂದು ಒಂದು ಉದಾಹರಣೆ ಕೊಡಬೇಕಾಗಿದೆ. ಮೊನ್ನೆ ದೆಹಲಿಗೆ ಮೈಸೂರು ದೇಶದಿಂದ ಸುಮಾರು ಒಂದು ಸಾವಿರ ರೈತರನ್ನು ವರ್ಲ್ಡ್ ಅಗ್ರಿಕಲ್ಚರ್ ಫೇರ್ ನೋಡುವುದಕ್ಕೆ ಕಳುಹಿಸಿ ಕೊಟ್ಟಿದ್ದರು. ಹಾಗೆ ಹೋದವರ ಪೈಕಿ ನಾನೂ ಒಬ್ಬ. ಇದಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಅಲ್ಲಿ ಹೋದ ರೈತನಿಗೆ ಎಲ್ಲಿ ನೋಡಬೇಕು ಎಂದು ಗೈಡ್ ಮಾಡಲು ಯಾರೂ ಇಲ್ಲದಿದ್ದರೆ, ಲಕ್ಷಾಂತರ ರೂಪಾಯಿನ ಖರ್ಚು ಮಾಡಿದ್ದರಿಂದ ಏನು ಪ್ರಯೋಜನ? ದೆಹಲಿ ಹೋಗಿ ರೈತರು ನೋಡಿದರು, ಉದ್ದಕ್ಕೂ ಇರುವ ರೈಲ್ವೆ ಸ್ಟೇಷನ್ನುಗಳನ್ನು ನೋಡಿದರು, ಚಹಾ ಅಂಗಡಿಗಳನ್ನು ನೋಡಿದರು, ಅಷ್ಟೇ. ಲಕ್ಷಾಂತರ ರೂಪಾಯಿ ರೈತರಿಗಾಗಿ ಖರ್ಚು ಮಾಡಿದ ಸಂದರ್ಭದಲ್ಲಿ ಅವರು ಫೇರನ್ನು ನೋಡುವುದಕ್ಕೆ ಮಾಡಿದ್ದ ಏರ್ಪಾಡು ಏನೇನೂ ಸಮರ್ಪಕವಾಗಿರಲಿಲ್ಲ. ಇಷ್ಟು ಖರ್ಚು ಮಾಡುವಾಗ, ಅದರಿಂದ, ರೈತನಿಗೆ ಪ್ರಯೋಜನ ಬರುವ ವ್ಯವಸ್ಥೆ ಮಾಡಬೇಕು. ರೈತನಿಗೆ ಸರಿಯಾದ ವ್ಯವಸ್ಥೆ ಮಾಡದೆ ಹೋದುದರಿಂದ ನಮ್ಮ ರೈತರು ಬಹಳ ಕಷ್ಟಪಟ್ಟರು. ಅವರಿಗೆ ಅಲ್ಲಿ ಭಾಷೆ ತಿಳಿಯುತ್ತಿರಲಿಲ್ಲ. ವಸ್ತು ಪ್ರದರ್ಶನದಿಂದ ವ್ಯವಸಾಯದ ವಿಚಾರದಲ್ಲಿ ಎಷ್ಟೋ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಆಸೆ ನಮ್ಮೆಲ್ಲರಿಗೆ ಇದ್ದರೂ ಅದಕ್ಕೆ ಸಮರ್ಪಕವಾದ ಏರ್ಪಾಡು ಇಲ್ಲದೆ, ತಿಳಿದುಕೊಳ್ಳದೆಯೇ ಹಿಂತಿರುಗಬೇಕಾಯಿತು. ನಮ್ಮ ಮಂತ್ರಿಗಳಿಗೆ ಆದಹಾಗೆ ಹೇಳುವವರು, ಕೇಳುವವರೇ ಇರಲಿಲ್ಲ. ಯಾವ ಯಾವ ಸ್ಟಾಲುಗಳಲ್ಲಿ ಏನು ನೋಡಬೇಕು, ಏನು ತಿಳಿದುಕೊಳ್ಳಬೇಕೆಂದು ಗೈಡ್ ಮಾಡುವವರೇ ಇರಲಿಲ್ಲ. ಹೀಗಾದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ದುಡ್ಡು ವಿನಾಕಾರಣ ಖರ್ಚಾಗುತ್ತದೆ.

ವ್ಯವಸಾಯ ಇಲಾಖೆಯಲ್ಲಿ ಪ್ರತಿವರ್ಷವೂ ಕೂಡ ರಾಷ್ಟ್ರೀಯ ವಿಸ್ತರಣಾ ಯೋಜನೆ ವಿಕಾಸ ಕೇಂದ್ರಗಳು ಇರುವ ಕಡೆ ವ್ಯವಸಾಯ ಅಭಿವೃದ್ಧಿ ತಕ್ಕ ಮಟ್ಟಿಗೆ ಸಾಧಿತವಾಗಿದ್ದರೂ ಕೂಡ, ಸ್ವಾತಂತ್ರ್ಯ ಬಂದು ಹತ್ತು ವರ್ಷವಾಗಿ ನಾವು 11 ನೆಯ ವರ್ಷದಲ್ಲಿದ್ದರೂ ಕೂಡ, ಪ್ರಗತಿದಾಯಕವಾದ ಬದಲಾವಣೆಗಳನ್ನು ವ್ಯವಸಾಯ ಇಲಾಖೆ ಮಾಡಿಲ್ಲ. ನಾವು ಪ್ರಗತಿದಾಯಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದುವರಿಯಬೇಕಾದರೆ, ಉತ್ತರ ಇಂಡಿಯಾದ ರೈಲ್ವೆಗಳು ಹೋದಹಾಗೆ ಹೋಗಬೇಕು, ಅವುಗಳಲ್ಲಿ ಪ್ರಯಾಣ ಮಾಡುತ್ತಿದ್ದರೆ ಕಣ್ಣೇ ಕಾಣುವುದಿಲ್ಲ. ಇಲ್ಲಿರುವ ನಮ್ಮ ರೈಲುಗಳಲ್ಲಿ ಹೋದರೆ, ಅವು ಪದ ಹೇಳಿಕೊಂಡು ಹೋಗುತ್ತಾ ಇರುತ್ತವೆ. ನಮ್ಮ ವ್ಯವಸಾಯ ಇಲಾಖೆ ಬ್ರಾಡ್ ಗೇಜ್ ಆಗಿ ಪ್ರಗತಿಯನ್ನು ತೋರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಂಜಿನ್ ಮಾತ್ರ ಹೊಸದಿದೆ. ಭೋಗಿಗಳೆಲ್ಲಾ ಹಳೆಯವು ಎಂದು ತಮ್ಮ ಅಭಿಪ್ರಾಯವೇ ?.

ಶ್ರೀ ಎಚ್. ವಿ. ವೀರೇಗೌಡ.—ಜೋರಾಗಿ ಭೋಗಿಗಳು ಓಡುವ ಹಾಗೆ ಮಾಡಿದರೆ ಉಪಯೋಗವಾಗುವುದಿಲ್ಲ. ಪ್ರಗತಿದಾಯಕವಾಗಿ ಮಾಡಿ ತೋರಿಸಬೇಕು. ಹಾಗೆ ಮಾಡದೆ ಹೋದರೆ ಏನೂ ಪ್ರಯೋಜನವಿಲ್ಲ. ಈಗ ಇಷ್ಟು ಬೆಳೆದಿದ್ದೇವೆ, ಜಪಾನ್ ಮಾದರಿಯಲ್ಲಿ ಬೆಳೆದರೆ ನಾಲ್ಕರಷ್ಟು ಬೆಳೆಯಬಹುದು, ಎಂದರೆ 1 ಲಕ್ಷ ಎಕರೆ $\times$ 4, ಎಂದು ಹೀಗೆ ಗುಣಾಕಾರ, ಭಾಗಾಕಾರ, ಕೂಡುವುದು ಕಳೆಯುವುದು, ಲೆಕ್ಕಾಚಾರ ಹಾಕುವುದು, ಈ ಕೆಲಸದಲ್ಲಿಯೇ ಇದ್ದರೆ, ಅದು ನಿಜವಾದ ಪ್ರಗತಿ ಎಂದು ಅನಿಸುವುದಿಲ್ಲ. ರೈತರಿಗೆ ಸಾಕಷ್ಟು ಗೈಡೆನ್ಸ್ ಕೊಡಲು ಏರ್ಪಾಡು ಮಾಡಿಧ್ದೀರ ? ಒಂದು ತಾಲ್ಲೂಕಿಗೆ ಒಬ್ಬ ಅಗ್ರಿಕಲ್ಚರ್ ಇನ್‌ಸ್ಪೆಕ್ಟರನ್ನು ಕೊಟ್ಟಿದ್ದೀರಿ. ಒಂದೊಂದು ತಾಲ್ಲೂಕಿನಲ್ಲಿ ಒಂದು ಲಕ್ಷದಿಂದ ಮೂರು ಲಕ್ಷ ಎಕರೆ ಜಮೀನು ಇರುತ್ತದೆ, ಒಬ್ಬ ಇನ್‌ಸ್ಪೆಕ್ಟರು ಎಲ್ಲಾ ಕಡೆ ಹೋಗಿ ಮೇಲ್ವಿಚಾರಣೆ ಮಾಡಿ ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದೂ ಅಲ್ಲದೆ ಎಲ್ಲವನ್ನೂ ಅಧಿಕಾರಿಗಳೇ ಮಾಡಲಿ ಎಂದು ನಾವು ಸುಮ್ಮನಿರುವುದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಜನಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಇರತಕ್ಕಂಥ ವ್ಯವಸಾಯ ಸಂಘಗಳು ಯಾವುವು ಇವೆಯೋ ಅವಕ್ಕೆ ಸರ್ಕಾರದವರು ಬಹಳ ಪ್ರೋತ್ಸಾಹ ಮಾಡಬೇಕು. ಅವುಗಳ ಮುಖಾಂತರ

ಪ್ರಚಾರಕಾರ್ಯ ನಡೆಯಬೇಕು, ಮತ್ತು ಆಹಾರ ಉತ್ಪತ್ತಿ ಆಗುವ ಹಾಗೆ ಮಾಡಬೇಕು. ಈ ಜವಾಬ್ದಾರಿಯನ್ನು ಅವುಗಳಿಗೆ ಕೊಡುವುದು ಬಿಟ್ಟು, ಎಲ್ಲಾ ಜವಾಬ್ದಾರಿಯನ್ನೂ ನೀವೇ ಇಟ್ಟುಕೊಂಡು, ಪ್ರಗತಿದಾಯಕವಾಗಿ ಮಾಡುತ್ತೇವೆಂದರೆ, ಅದು ಕನಸಿನ ಮಾತು; ಎಷ್ಟು ಕೋಟಿ ರೂಪಾಯಿಗಳು ಖರ್ಚಾದರೂ ಅದರಿಂದ ಪ್ರಗತಿ ಮಾತ್ರ ಸಾಧ್ಯವಾಗುವುದಿಲ್ಲ. ವ್ಯವಸಾಯ ಸಂಘಗಳಿಗೆ ಏನೇನು ಅನುಕೂಲಗಳು ಸೌಕರ್ಯಗಳು ಬೇಕೋ, ಅವುಗಳನ್ನು ಆಯಾ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿಯೇ ಕೊಟ್ಟರೆ, ಅವು ಮುಂದೆ ಬರುತ್ತವೆ. ಈ ವರ್ಷ ವ್ಯವಸಾಯ ಸಂಘಗಳಿಗೆ ಗೋಡೌನ್‌ಗಳನ್ನು ಕೊಟ್ಟಿದ್ದೀರಿ. ಕೆಲವು ವ್ಯವಸಾಯ ಸಂಘಗಳಲ್ಲಿ ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ಆಫೀಸರುಗಳ ಸಲಹೆ ತೆಗೆದುಕೊಂಡು ನವೀನ ಕಾಲದ ಬೆಳೆಯನ್ನು ಮಾಡಿದ್ದಾರೆ. ಹೀಗೆ ಅಧಿಕಾರಿಗಳ ಜೊತೆಗೆ ಖಾಸಗಿ ಜನರು ಕೆಲಸ ಮಾಡಿ ಪ್ರೋಗ್ರೆಸ್ ತೋರಿಸಿಗ ತಕ್ಕಂಥ ಅನೇಕ ಸಂಧರ್ಭಗಳಿವೆ. ಕೆಲವು ಕಡೆ ಹೀಗೆ ಮುಂದೆ ಬರುವುದಕ್ಕೆ ಸಾಧ್ಯವಾಗಿದ್ದರೆ ಬೇರೆ ಕಡೆಗಳಲ್ಲಿಯೂ ಅನುಕೂಲಗಳನ್ನು ಒದಗಿಸಿದರೆ ಬರಲು ಸಾಧ್ಯ ಎಂದು ಹೇಳುತ್ತಿದ್ದೇನೆ. ಬಿತ್ತನೆ ಬೀಜಗಳನ್ನು ಶೇಖರಿಸಿ ಇಟ್ಟುಕೊಳ್ಳುವುದಕ್ಕೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಂದು ಗೋಡೌನಿನ ಅನುಕೂಲವಿಲ್ಲ. ಅಂಥ ಕಡೆ 5-6 ಸಾವಿರ ರೂಪಾಯಿಗಳನ್ನು ಸಹಕಾರ ಸಂಘಗಳಿಗೆ ಕೊಟ್ಟು, ಅವರ ಮುಖಾಂತರ ಒಳ್ಳೆಯ ಬಿತ್ತನೆ ಬೀಜಗಳನ್ನು ಶೇಖರಿಸಿ, ಬಿತ್ತನೆಯ ಕಾಲದಲ್ಲಿ ವ್ಯವಸಾಯಗಾರರಿಗೆ ಅದನ್ನು ಒದಗಿಸುವ ವ್ಯವಸ್ಥೆ ಮಾಡಿ. ಹೀಗೆ ಸರ್ಕಾರದವರು ರೈತರಿಗೆ ಸಾಕಷ್ಟು ಪ್ರೋತ್ಸಾಹ ಕೊಡದಿದ್ದರೆ, ವ್ಯವಸಾಯಾಭಿವೃದ್ಧಿ ಬಹಳ ಮಟ್ಟಿಗೆ ಕುಂಠಿತವಾಗುತ್ತದೆ.

ವ್ಯವಸಾಯ, ಸಹಕಾರ, ಅರಣ್ಯ ಎಂದು ಆಡಳಿತ ಸೌಕರ್ಯಕ್ಕಾಗಿ ಬೇರೆ ಬೇರೆ ಇಲಾಖೆಗಳಾಗಿ ಮಾಡಿದ್ದರೂ, ಇವುಗಳೆಲ್ಲಾ ಒಟ್ಟಾಗಿ ಸೇರಿಕೊಂಡು ಪ್ರಜೆಗಳಿಗಾಗಿ ಕೆಲಸ ಮಾಡಲಿ ಎಂದು ಮಾಡಿದ್ದಾರೆ. ಇಲಾಖೆಗಳು ದೊಡ್ಡದಾಗಿರುವುದರಿಂದ, ಒಬ್ಬ ಮಂತ್ರಿಗಳಿಗೇ ಎಲ್ಲವನ್ನೂ ಕೊಟ್ಟರೆ ಕೆಲಸವನ್ನು ಸಮರ್ಪಕವಾಗಿ ನೋಡಿಕೊಳ್ಳುವುದಕ್ಕಾಗುವುದಿಲ್ಲವೆಂದು, ಈ ಇಲಾಖೆಗಳಿಗೆ ಬೇರೆ ಬೇರೆ ಮಂತ್ರಿಗಳನ್ನೇ ನೇಮಿಸಿದ್ದಾರೆ. ಈ ಇಲಾಖೆಗಳೆಲ್ಲಾ ರೈತನ ಅಭಿವೃದ್ಧಿಗಾಗಿವೆ ಎಂದು ಒಂದೊಂದರಲ್ಲಿ ಸಹಕಾರ ಮನೋಭಾವವಿರಬೇಕು. ರೈತನ ಸರ್ವತೋಮುಖವಾದ ಅಭಿವೃದ್ಧಿಗಾಗಿರುವ ಒಂದು ಇಲಾಖೆಯನ್ನು, ಬೇರೆ ಬೇರೆ ಇಲಾಖೆಗಳನ್ನಾಗಿ ಮಾಡಿ ಕೆಲಸವನ್ನು ಹಂಚಿದ್ದಾರೆ, ಅಷ್ಟೆ. ಆದ್ದರಿಂದ ಯಾವ ಇಲಾಖೆಯಲ್ಲಿ, ಯಾವ ಭಾಗದಲ್ಲಿ ಉಪಯುಕ್ತವಾದ ಕೆಲಸವನ್ನು ಮಾಡಿದರೂ, ಅದು ರೈತನಿಗೆ ಸೇರುತ್ತದೆಂದು ತಿಳಿದುಕೊಳ್ಳಬೇಕು. ನಿಮ್ಮ ಮಟ್ಟದಲ್ಲಿ, ಕಾರ್ಯಕ್ರಮಗಳನ್ನೆಲ್ಲಾ ಏಕರೀತಿಯಲ್ಲಿ ಒಂದು ಯೋಜನೆ ಹಾಕಿಕೊಂಡು, ಅದರ ಫಲ ರೈತನಿಗೆ ನೇರವಾಗಿ ಹೋಗಬೇಕು. ಅದು ಬಿಟ್ಟು ಕೋ-ಆಪರೇಟಿವ್ ಇಲಾಖೆಯದೇ ಒಂದು ದಾರಿ, ವ್ಯವಸಾಯ ಇಲಾಖೆಯದೇ ಒಂದು ದಾರಿ. ಪಿ. ಡಬ್ಲ್ಯು. ಡಿ. ಇಲಾಖೆಯದೇ ಒಂದು ದಾರಿ, ಹೀಗೆಲ್ಲಾ ಆಗಿಬಿಟ್ಟರೆ, ಸಹಕಾರ ಎಲ್ಲಿ? ನಿಮ್ಮ ನಿಮ್ಮ ಮಟ್ಟದಲ್ಲಿಯೇ ಅಸಹಕಾರ. ಶ್ರೀಮಾನ್ ಮುಕ್ಕಣ್ಣಪ್ಪನವರು ಸಹಕಾರವಿಲ್ಲವೆಂದು ಹೇಳುತ್ತಿದ್ದಾರೆ.

Sri C. J. MUCKANNAPPA.—Sir, he is unnecessarily making that charge. I did not mention that. He wants to mention it, but because he is a Party man and the Party may take action against him; he is dragging my name. I have not; made that charge as to whether it is co-operation or non-co-operation among the Ministers. It is established that there is non-co-operation among Ministers.

ಶ್ರೀ ಎಚ್. ವಿ. ವೀರೇಗೌಡ.—ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಸಾಲಗಳನ್ನೆಲ್ಲಾ ಕೊಡುತ್ತಿದ್ದೀರಿ. ಕಳೆದ ಸಾಲಿನಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಸುಮಾರು 13 ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೀರಿ. ಅದಕ್ಕೆ ಸರ್ಕಾರದ ಮೇಲ್ವಿಚಾರಕರನ್ನು ಮಾತ್ರ ಇಟ್ಟಿದ್ದೀರಿ; ಕೊಡತಕ್ಕಂಥಾದ್ದು, ರೆಕಾರ್ಡ್ ಮಾಡತಕ್ಕಂಥಾದ್ದು, ವಸೂಲು ಮಾಡತಕ್ಕಂಥಾದ್ದು, ಮುಂತಾದ್ದನ್ನೆಲ್ಲಾ ಖಾಸಗಿ ಜನಗಳೇ ಮಾಡುತ್ತಿದ್ದಾರೆ. ಈ ಸಾಲಗಳನ್ನು ಕೊಟ್ಟು ಸಮರ್ಪಕವಾಗಿ ವಸೂಲು ಮಾಡುತ್ತಿದ್ದೇವೆ. ಒಂದು ಕೋಟಿ ರೂಪಾಯಿಯನ್ನು ಕೂಡ ಕಲೆಕ್ಟ್ ಮಾಡಿದ್ದೇವೆ. ಹೀಗಿದ್ದರೂ ತಕಾವಿ ಸಾಲ ಕೊಡುವುದನ್ನು ಸರ್ಕಾರದವರು ಏಕೆ ಇಟ್ಟುಕೊಂಡಿದ್ದಾರೆ? ಯಾರಿಗೋ ತಮಗೆ ಬೇಕಾದಂಥ ಪ್ರಭೃತಿಗಳಿಗೆ ಮತ್ತು ಕೆಲವರ ಪ್ರೀತಿ ಸಂಪಾದಿಸುವುದಕ್ಕೆ, ಅವರಿಗೆ ಎಷ್ಟೆಷ್ಟು ಹಣ ಬೇಕೋ ಅಷ್ಟನ್ನು ಕೊಡುವುದಕ್ಕೆ ಈ ಅಧಿಕಾರವನ್ನು ಸರ್ಕಾರದಲ್ಲಿ ಇಟ್ಟಿದ್ದೀರೆಂದು ನನಗೆ ಅನಿಸುತ್ತದೆ. 1959ನೆಯ ಇಸವಿಯಲ್ಲಿಯೇ ತಕಾವಿ ಸಾಲವನ್ನು ಕೂಡ ಸಹಕಾರ ಸಂಘಗಳ ಮೂಲಕವೇ ಕೊಡಬೇಕೆಂದು ಸರ್ಕಾರದವರು ಆರ್ಡರ್ ಕೊಟ್ಟರು. ಅದನ್ನು ಜಾರಿಗೆ ಕೊಡದೆ ಇರುವುದಕ್ಕೆ ಕಾರಣವೇನು ಎನ್ನುವುದು ನನಗೆ ಗೊತ್ತಿಲ್ಲ. ಒಂದೊಂದು ಸಾಲವನ್ನು ಒಂದೊಂದು ಏಜೆನ್ಸಿ ಮೂಲಕ ಕೊಡುವುದಾದರೆ ಹಿಡಿತವಿರುವುದಿಲ್ಲ. ಎಲ್ಲಾ ಸಾಲಗಳನ್ನೂ ಸಹಕಾರ ಸಂಘಗಳ ಮೂಲಕವೇ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಕೇವಲ 60 ಲಕ್ಷ ರೂಪಾಯಿನ ತಕಾವಿ ಸಾಲವನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಂಡಿದ್ದೀರಿ. ಕೋಟಿಗಟ್ಲೆ ರೂಪಾಯಿಯ ಸಾಲವನ್ನು ಸಹಕಾರ ಸಂಘಗಳ ಮೂಲಕ ಕೊಟ್ಟು, ವಸೂಲು ಮಾಡುತ್ತಿರುವಾಗ, 60 ಲಕ್ಷ ರೂಪಾಯಿಯನ್ನು ಕೊಟ್ಟು ವಸೂಲು ಮಾಡುವುದಕ್ಕೆ ಶಕ್ತಿ ಇಲ್ಲ ಎಂದು ಹೇಳುವುದರಲ್ಲಿ ಏನೋ ಒಂದು ರಹಸ್ಯವಿದೆ ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ.

4-30 P.M.

ಕೊಟ್ಟಿರುವ ತಕಾವಿ ಸಾಲಗಳನ್ನು ಕೂಡ ಸರಿಯಾಗಿ ವಸೂಲು ಮಾಡುತ್ತಿಲ್ಲ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯಲ್ಲಿ ಲಕ್ಷಾಂತರ ರೂಪಾಯಿ ತಕಾವಿ ಸಾಲ ಕೊಟ್ಟಿದ್ದಾರೆ. ಅದನ್ನು ವಸೂಲು ಮಾಡದೇ ಇರುವುದನ್ನು ನೋಡಿದರೆ, ಸರ್ಕಾರದವರು ವಸೂಲು ಮಾಡುತ್ತಾರೋ ಅಥವ ಇಲ್ಲವೇ ಇಲ್ಲವೊ ಎಂಬ ಭಾವನೆ ಜನರಲ್ಲಿ ಮೂಡಬಹುದು. ಅಲ್ಲದೆ

(ಶ್ರೀ ಎಚ್. ವಿ. ವೀರೇಗೌಡ)

ಹೀಗೆ ವಸೂಲು ಮಾಡದೇಯಿದ್ದರೆ ಇತರ ರೈತರಿಗೆ ಸಾಲ ಸಿಕ್ಕುವುದಕ್ಕವಕಾಶವಿರುವುದಿಲ್ಲ. ಆದುದರಿಂದ ಸಕಾಲದಲ್ಲಿ ಕೊಟ್ಟಿರುವ ಸಾಲವನ್ನು ವಸೂಲು ಮಾಡಬೇಕು, ಅಲ್ಲದೆ ಎಲ್ಲ ಸಾಲಗಳನ್ನೂ ಸಹಕಾರ ಸಂಘಗಳ ಮೂಲಕವೇ ಕೊಡಿಸಬೇಕು. ರೈತ ಬೆಳೆಯತಕ್ಕ ಸಾಮಾನುಗಳೆಲ್ಲವನ್ನೂ ಸಹಕಾರ ಸಂಘಗಳ ಮೂಲಕ ದಾಸ್ತಾನು ಮಾಡಿಸಿ ಮಾರಾಟ ಮಾಡಿಸಬೇಕೆಂದು ಯೋಜನೆ ಹಾಕಿದ್ದಾರೆ. ರೈತರಿಗೆ ಅನುಕೂಲವಾಗಲೆಂದು ಇಂಥ ಉತ್ತಮ ಯೋಜನೆಗಳನ್ನು ಹಾಕಿದ್ದಾರೆ. ಆದರೆ ಇವನ್ನು ಕಾರ್ಯಗತ ಮಾಡುವಾಗ ಸರ್ಕಾರದವರು ಸ್ವಲ್ಪ ಎಡವುತ್ತಾರೆ. ಹೀಗೆ ಮಾಡಬಾರದು. ಎಲ್ಲ ಕಡೆಯೂ ಸಹಕಾರ ಸಂಘಗಳು ಕೆಲಸ ಮಾಡುತ್ತವೆಂದು ನಾನು ಹೇಳುವುದಿಲ್ಲ. ಎಲ್ಲಿ ಕೆಲಸ ಮಾಡುತ್ತಿಲ್ಲವೋ ಅಲ್ಲಿ ಬೇಡ. ಆದರೆ ಎಲ್ಲೆಲ್ಲಿ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ ಅಲ್ಲಿ ಆ ಸಂಘಗಳ ಮೂಲಕವೇ ಕೊಡಿಸಬೇಕು. ಇದು ಬಿಟ್ಟು ವ್ಯವಸಾಯಗಾರರಿಗೆ ಬೇಕಾದ ಸಲಕರಣೆಗಳನ್ನು ಮಾರಲು ಬೇರೆ ವ್ಯಾಪಾರಗಾರರಿಗೆ ಲೈಸೆನ್ಸ್ ಕೊಡುತ್ತಾರೆ. ಚೆನ್ನಾಗಿ ಕೆಲಸ ಮಾಡುತ್ತಾ ಸರ್ಕಾರದ ಮೆಚ್ಚಿಗೆಯನ್ನು ಪಡೆದಿರುವ ಸಹಕಾರ ಸಂಘಗಳಿರುವ ಕಡೆ ವ್ಯಾಪಾರಗಾರರಿಗೆ ಲೈಸೆನ್ಸ್ ಕೊಡುತ್ತಾ ಹೋದರೆ, ಸಹಕಾರ ಸಂಘಗಳ ಮೇಲೆ ಪೈಪೋಟಿಗೆ ಅವಕಾಶ ಮಾಡಿದ ಹಾಗಾಗುತ್ತದೆ. ಹೀಗೆ ಮಾಡುವುದು ಒಳ್ಳೆಯ ನೀತಿಯಲ್ಲ. ಇದರಿಂದ ದೇಶಕ್ಕೆ ಒಳ್ಳೆಯದು ಮಾಡಿದ ಹಾಗಾಗುವುದಿಲ್ಲ, ದೇಶಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಹೀಗೆ ಮಾಡಿ, ಒಳ್ಳೆಯ ಯೋಜನೆಯನ್ನೇ ತುಳಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಲ್ಲ. ಅನೇಕ ದಿನಗಳಿಂದಲೂ ಹೀಗೆ ಖಾಸಗಿ ವ್ಯಾಪಾರಗಾರರಿಗೆ ಲೈಸೆನ್ಸ್ ಕೊಡಬಾರದೆಂದು ನಾವು ಹೇಳುತ್ತಿದ್ದರೂ ಇದನ್ನು ಹೆಚ್ಚಿಸುತ್ತಿದ್ದಾರೆ. ಸಹಕಾರ ಸಂಘಗಳಿರುವ ಕಡೆ ಏಕೆ ಹೀಗೆ ಕೊಡಬೇಕು? ಹೀಗೆ ಖಾಸಗಿಯವರಿಗೆ ಕೊಟ್ಟರೆ, ಈ ಸಾಮಾನುಗಳು ಸಹಕಾರ ಸಂಘದಲ್ಲಿ ಮುಗಿದ ತಕ್ಷಣ ಇವರು ಹೆಚ್ಚು ಬೆಲೆಗೆ ಮಾರುತ್ತಾರೆ. ತಮಗೆ ಬಂದ ಸಾಮಾನುಗಳನ್ನು ದಾಸ್ತಾನು ಮಾಡಿಟ್ಟುಕೊಂಡು ಸಹಕಾರ ಸಂಘದಲ್ಲಿ ಮುಗಿದ ತಕ್ಷಣ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾರೆ. ಹೀಗಾದರೆ ರೈತರಿಗೆ ಸಹಾಯವಾಗುವುದಿಲ್ಲ. ಆದಕಾರಣ ಸಹಕಾರ ಸಂಘಗಳ ಮೂಲಕವೇ ಕೊಡಲು ಏರ್ಪಾಡು ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಜನರ ಬೇಡಿಕೆಗಿಂತ ಸರ್ಕಾರದ ನೀಡಿಕೆ ಕಡಮೆಯಿದ್ದಾಗ ಇಂಥ ಪದಾರ್ಥಗಳನ್ನು ಸಹಕಾರ ಸಂಘಗಳ ಮೂಲಕವೇ ಕೊಡಬೇಕು, ಇತರರಿಗೆ ಲೈಸೆನ್ಸ್ ಕೊಡಬಾರದೆಂಬದು ತಮ್ಮ ಅಭಿಪ್ರಾಯತಾನೆ?

ಶ್ರೀ ಎಚ್. ವಿ. ವೀರೇಗೌಡ.—ಹೌದು. ದೇಶವನ್ನು ಸಹಕಾರಮಯ ಮಾಡಬೇಕೆಂದು ಮಾನ್ಯ ಮಂತ್ರಿಗಳೂ, ನಾವೂ, ಅಧಿಕಾರಿಗಳೂ ಎಲ್ಲರೂ ಹೇಳುತ್ತಿರುವಾಗ ಇದಕ್ಕೆ ವಿರುದ್ಧವಾಗಿ ಮಾಡುವುದರಲ್ಲಿ ಅರ್ಥವಿಲ್ಲ. ನಾವಾಗಲೀ ಮಂತ್ರಿಗಳಾಗಲಿ. ಏನಾದರೂ ಹೇಳಿದರೆ ಅದರಂತೆ ನಡೆದರೆ ಜನರು ನಮ್ಮ ಮಾತನ್ನು ಕೇಳುತ್ತಾರೆ, ನಮ್ಮ ಮಾತಿನಲ್ಲಿ ಅವರಿಗೆ ಗೌರವವಿರುತ್ತದೆ. ಹಾಗಿಲ್ಲದೆ ಹೇಳುವುದೇ ಬೇರೆ, ಮಾಡುವುದೇ ಬೇರೆಯಾದರೆ, ನಮ್ಮ ಮಾತಿನಲ್ಲಿ ಜನರಿಗೆ ಬೆಲೆ ಇರುವುದಿಲ್ಲ ಮತ್ತು ಜನಕ್ಕೆ ಏನೂ ಸಹಾಯವಾಗುವುದಿಲ್ಲ. ಆದುದರಿಂದ ಇನ್ನು ಮುಂದಾದರೂ ಈ ದೋಷವನ್ನು ತಪ್ಪಿಸುತ್ತೇವೆಂದು ಮಂತ್ರಿಗಳು ಹೇಳಬೇಕು. ಹಾಗಿಲ್ಲದೆ ನಮ್ಮ ಮೇಲಿನ ಪೈಪೋಟಿಗಾಗಿ ಇನ್ನೂ ಲೈಸೆನ್ಸ್ ಕೊಡುವುದನ್ನು ಹೆಚ್ಚಿಸಿದರ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಇನ್ನೊಂದು ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಎಲ್ಲಿಯಾದರೂ ಒಂದು ಸಹಕಾರ ಸಂಘ ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಅದಕ್ಕೆ rival ಆಗಿ ಇನ್ನೊಂದು ಸಂಘವನ್ನು ಮಾಡಲು ಲೈಸೆನ್ಸ್ ಕೊಟ್ಟು ಪ್ರೋತ್ಸಾಹ ಕೊಡುತ್ತಾರೆ. ಸಹಕಾರ ಸಂಘವನ್ನು ಮಾಡಿ, ಸಿಬ್ಬಂದಿ ಖರ್ಚು ಕೊಡುತ್ತೇವೆ, ಇತರ ಸಹಾಯ ಕೊಡುತ್ತೇವೆ, ಎಂದು ಪ್ರಚಾರ ಮಾಡಿ, ನಮ್ಮನ್ನು ಸಂಘ ಸ್ಥಾಪನೆ ಮಾಡಿ ಕೆಲಸ ಮಾಡುವಂತೆ ಮಾಡಿ, ನಾವು ಕೆಲಸ ಮಾಡಿಕೊಂಡು ಹೋಗುತ್ತಿದ್ದರೆ, ಅಲ್ಲಿ ಮತ್ತೊಂದು ಸಂಘವನ್ನು ರಿಜಿಸ್ಟರ್ ಮಾಡುತ್ತಾರೆ. ಹೀಗಾದರೆ ಹೇಗೆ? ಒಂದು ಸಂಘಕ್ಕೆ ಕೊಡುವ ಸಾಮಾನುಗಳು ಭಾಗವಾಗಬೇಕಾಗುತ್ತದೆ. ಈ ರೀತಿ ಸಂಘಗಳಾಗಲು ಅಧಿಕಾರಿಗಳು ಕೂಡ ಸಹಾಯ ಮಾಡುತ್ತಿದ್ದಾರೆ. ಎಷ್ಟೋ ಅಧಿಕಾರಿಗಳಿಗೆ ಸಹಕಾರ ತತ್ವದಲ್ಲಿ ನಂಬಿಕೆಯಿಲ್ಲ, ಸಹಕಾರವೆಂದರೆ, ಅದು ಕನಸಿನ ಮಾತು ಎಂದು ಹೇಳುತ್ತಾರೆ. ಅಧಿಕಾರಿಗಳೇ ಹೀಗೆ ಹೇಳಿದರೆ ಇದರಿಂದೇನು ಪರಿಣಾಮವಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಒಂದು ಸಂಘ ರೈತರಿಗೆ ಬೇಕಾದ ವ್ಯವಸಾಯದ ಸಾಮಾನುಗಳನ್ನು, ಎಂದರೆ ಕಬ್ಬಿಣ, ಗೊಬ್ಬರ ಮುಂತಾದುವನ್ನು ಒದಗಿಸುವುದರ ಜೊತೆಗೆ ಅವರಿಗೆ ಬೇಕಾದ ಬಟ್ಟೆ, ಸಂಬಾರದ ಸಾಮಾನುಗಳು, ಅರಶಿನ, ಗೋಧಿ ಮುಂತಾದ ಸಾಮಾನುಗಳನ್ನು ತರಿಸಿ ಜನರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲವೆ? ಸರ್ಕಾರ ಸಹಕಾರ ಸಂಘಗಳಿಗೆ ಸಹಾಯ ಮಾಡಬೇಕೆಂದು ಸಾಮಾನುಗಳನ್ನು ಕೊಟ್ಟರೆ, ಇದು ಸಾಧ್ಯವಾಗುತ್ತದೆ. ಈಗಲಾದರೂ ಇದನ್ನು ಮನಗಂಡು ಸರ್ಕಾರ ಸಹಾಯ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—Co-operative Commonwealth ಕಟ್ಟಬೇಕೆಂದೂ ಸಹಕಾರ ತತ್ತ್ವದ ತಳಹದಿಯ ಮೇಲೆ ದೇಶವನ್ನು ಕಟ್ಟಬೇಕೆಂದೂ ತಮ್ಮ ಉದ್ದೇಶವೆಂದು ಸರ್ಕಾರ ಹೇಳುತ್ತಿರುವಾಗ, ಇದೇನು ಹೀಗೆ ಹೇಳುತ್ತಿದ್ದೀರಿ?

ಶ್ರೀ ಎಚ್. ವಿ. ವೀರೇಗೌಡ.—ಸ್ಪರ್ಧೆಯನ್ನು ತಂದಿಟ್ಟು ಹೀಗೆ ಒಂದೇ ಸ್ಥಳದಲ್ಲಿ ಲೈಸೆನ್ಸ್ ಕೊಡುತ್ತಿದ್ದಾರೆ. ಇದಕ್ಕೆ ಅವಕಾಶವಿರಬಾರದು. ಒಂದು ಊರಿನಲ್ಲಿ ಒಂದು ಸಹಕಾರ ಸಂಘ ಕೆಲಸ ಮಾಡುತ್ತಿದ್ದರೆ ಅದು ಹೇಗೆ ಕೆಲಸ ಮಾಡುತ್ತಿದೆ, ಹತ್ತು ಹನ್ನೆರಡು ವರ್ಷಗಳಿಂದ ಏನೇನು ಮಾಡಿದೆ ಎಂಬುದನ್ನೆಲ್ಲಾ ನೋಡಬೇಕು.

ಶ್ರೀ ಕೆ.ಪಿ.ಗದಗ್ (ಗದಗ್).—ಒಂದೇ ಗ್ರಾಮದಲ್ಲಿ ಒಂದೇ ರೀತಿಯ ಸಹಕಾರ ಸಂಘಗಳನ್ನು ಒಂದಕ್ಕಿಂತ ಹೆಚ್ಚು ಮಾಡಬಾರದೆಂಬ ನಿಯಮವಿಲ್ಲವೆ?

ಶ್ರೀ ಎಚ್. ವಿ. ವೀರೇಗೌಡ.—ಅದನ್ನು ಕಾರ್ಯರೂಪಕ್ಕೆ ತಂದರೆ ಬಹಳ ಸಂತೋಷ. ಒಂದು ಸಂಘ ಯಾವ ಕೆಲಸ ಮಾಡುತ್ತಿರುತ್ತದೆಯೋ ಅದೇ ಕೆಲಸವನ್ನು ಮಾಡುವುದಕ್ಕೆ ಅಲ್ಲೇ ಇನ್ನೊಂದು ಸಂಘವನ್ನು ರಿಜಿಸ್ಟರು ಮಾಡಲು ಅವಕಾಶ ಕೊಟ್ಟಿದ್ದಾರೆ.

ಇದನ್ನು ನೋಡಿ ಸರ್ಕಾರ ದೇಶದಲ್ಲಿದೆಯೋ ಇಲ್ಲವೋ ಎಂದು ಸಂದೇಹ ಬರುವ ಸ್ಥಿತಿ ಬಂದಿದೆ. ಯಾರೋ ಅಧಿಕಾರಿಗಳನ್ನು ಹಿಡಿದು ಪ್ರಭಾವಬೀರಿ ಬಲವಂತದಿಂದ ರಿಜಿಸ್ಟರ್ ಮಾಡಿಸಿದ್ದಾರೆ. ಇದು ತುಂಬಾ ವಿಷಾದಕರ. ಮೈಸೂರು ದೇಶದಲ್ಲೇ ಒಳ್ಳೆಯ ಹೆಸರು ಪಡೆದಿರುವ ಸಹಕಾರ ಸಂಘಗಳಿಗೆ ಕುಂದು ತಂದು ಅವನ್ನು ಮುರಿದು ಹಾಕುವ ಕೆಲಸ ಮಾಡಬಾರದು, ಸರ್ಕಾರ. ಸಹಕಾರ ಮತ್ತು ಬೇಸಾಯ ಅಣ್ಣತಮ್ಮಂದಿರಿದ್ದ ಹಾಗೆ. ಬೇಸಾಯ ಮತ್ತು ಸಹಕಾರ ಸಂಘಗಳಲ್ಲಿ ಏನಾದರೂ ನ್ಯೂನತೆ ಕಂಡುಬಂದರೆ, ಮಂತ್ರಿಗಳು ಅಂಥ ಕಡೆ ಹೋಗಿ, ಅಲ್ಲಿನ ಅಧಿಕಾರಿಗಳನ್ನೂ ಖಾಸಗಿ ಜನರನ್ನೂ ಕರೆಸಿ ಮಾತನಾಡಿ, ಸಹಕಾರ ಸಂಘಗಳ ಕೆಲಸಕ್ಕೆ ಅಡ್ಡಿ ಬಾರದಂತೆ ಅವನ್ನು ಸರಿಯಾಗಿ ನಡೆಸಲು ಸಹಾಯ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಹಾಗೆ ಮಾಡದಿದ್ದರೆ ಮಾನ್ಯ ನೆಹರೂ ಅವರು ಸಹಕಾರ ತತ್ವದ ಆಧಾರದ ಮೇಲೆ ಎಲ್ಲವೂ ನಡೆಯಬೇಕೆಂದು ಏನು ಕನಸು ಕಾಣುತ್ತಿದ್ದಾರೋ ಅದು ನನಸಾಗುವುದಿಲ್ಲ, ಅವರ ಉದ್ದೇಶ ಸಾರ್ಥಕವಾಗುವುದಿಲ್ಲ.

ವ್ಯವಸಾಯದ ಕಾಲೋನಿಗಳನ್ನು ಮಾಡುತ್ತಿದ್ದಾರೆ. ಇವನ್ನು ಮಾಡುವಾಗ ದಯದಾಕ್ಷಿಣ್ಯಗಳಿಗೊಳಗಾಗದೆ ಮಾಡಬೇಕು. ಎಷ್ಟೋ ಕಡೆ ಅಗತ್ಯವಿದ್ದಲ್ಲಿ ಅಲ್ಲಿ ಕಾಲೊನಿಗಳನ್ನು ಮಾಡುವುದಿಲ್ಲ. ಈ ವಿಷಯವಾಗಿ ನಮ್ಮ ಕ್ಷೇತ್ರದಲ್ಲಿ ಒಂದು ಮೀಟಿಂಗ್ ಮಾಡಿ ನಿರ್ಣಯ ಕೂಡ ಮಾಡಿ ಸರ್ಕಾರಕ್ಕೆ ಬರೆದಿದ್ದೇವೆ. ಎಷ್ಟೋ ಜನರಿಗೆ ಎತ್ತುಗಳನ್ನು ಕೊಟ್ಟಿದ್ದಾರೆ, ಅವನ್ನು ಅವರು ಮಾರಿಕೊಂಡಿದ್ದಾರೆ. ಕಾಲೊನಿಯಲ್ಲಿ ವಾಸಮಾಡುವುದಿಲ್ಲ. ಹೀಗಾದರೆ ವ್ಯವಸಾಯ ಕಾಲೊನಿ ಏನಾಗುತ್ತದೆ? ಜನ ಚೆನ್ನಾಗಿ ಬದುಕಲಿ, ವ್ಯವಸಾಯಾಭಿವೃದ್ಧಿಯಾಗಲಿ ಎಂಬ ಉದ್ದೇಶದಿಂದ ಮಾಡಿದರೆ, ಜನ ಹೀಗೆ ಸರಿಯಾಗಿ ನಡೆದುಕೊಳ್ಳದೇ ಹೋದರೆ ಹೇಗೆ! ಕಾಲೊನಿಯಲ್ಲೇ ವಾಸ ಮಾಡಿಕೊಂಡು ವ್ಯವಸಾಯ ಮಾಡುವವರಿಗೇ ಸರ್ಕಾರ ಸಹಾಯ ಮಾಡಬೇಕು. ಹಣವನ್ನು ಎಷ್ಟು ಬೇಕಾದರೂ ಕೊಡಲಿ, ಆದರೆ ಕೊಡುವ ಹಣ ಸಾರ್ಥಕವಾಗುವ ಹಾಗೆ ವ್ಯವಸ್ಥೆ ಮಾಡಬೇಕು.

ಶ್ರೀ ಎಚ್. ರಾಚಯ್ಯ.—ಯಾರು ದುರುಪಯೋಗ ಮಾಡಿಕೊಂಡರೆಂಬ ಬಗ್ಗೆ ತಪಶೀಲು ಕೊಟ್ಟರೆ ವಿಚಾರ ಮಾಡುತ್ತೇವೆ.

ಶ್ರೀ ಎಚ್.ವಿ.ವೀರೇಗೌಡ.—ತರೀಕೆರೆ ತಾಲ್ಲೂಕಿನಲ್ಲಿ 19 ಜನರು ಎತ್ತುಗಳನ್ನು ಮಾರಿಕೊಂಡಿದ್ದಾರೆ, ಹೀಗೆ ಯಾರು ಯಾರು ಮಾರಿಕೊಂಡಿದ್ದಾರೋ ಅವರನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಹೇಳಿದೆವು. ಡೆಪ್ಯುಟಿ ಕಮಿಷನರಿಗೂ ಹೇಳಿದೆ. ಅವರು ಷೋ ಕಾಸ್ ನೋಟೀಸ್ ಕೊಟ್ಟಮೇಲೆ ತಾವು ಕೊಟ್ಟಂಥ ಎತ್ತುಗಳಿಗೆಬದಲು ಅರ್ಧಬೆಲೆಗೆ ಬೇರೆ ಕೊಂಡು ತಂದು ಕಟ್ಟಿ ಹಾಕಿದ್ದರು. ಈಚೆಗೆ ವಿಚಾರ ಮಾಡಿದ್ದರಲ್ಲಿ ಅವುಗಳನ್ನು ಆಗಲೇ ಮಾರಿದ್ದಾರೆಂದು ಗೊತ್ತಾಗಿದೆ. ಇದನ್ನು ಪರಿಶೀಲನೆಮಾಡಿ ಸರಿಯಾದ ರೀತಿಯಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಅರಣ್ಯ ಸಂಪತ್ತಿನ ವಿಚಾರದಲ್ಲಿ ನನಗೆ ಪರಿಚಯ ಕಡಮೆ, ನಮ್ಮ ಕಡೆ ಒಂದೆರಡು ಬೆಟ್ಟಗಳಿವೆ ಅಷ್ಟೆ; ಅಲ್ಲಿ ಅಲ್ಲಲ್ಲೇ ಅರಣ್ಯಗಳನ್ನು ಬೆಳೆಸಬೇಕೆಂದು ಹಾಗೆ ಉಳಿಸಿಕೊಂಡಿದ್ದಾರೆ. ಬೆಳೆಸಕೂಡದೆಂದು ನಾನು ಹೇಳುತ್ತಿಲ್ಲ. ಈಗ 10 ವರ್ಷದಿಂದಲೂ ಪ್ಲಾಂಟೇಷನ್ ಬೆಳೆಸುತ್ತೇವೆಂದು ಹೇಳುತ್ತಲೇ ಇದ್ದಾರೆ. ಆದರೆ ಸಸಿಗಳು ಮಾತ್ರ ಒಂದೂ ಬೆಳೆದಿಲ್ಲ. ತಾನೆ ತಾನಾಗಿ ಬೆಳೆದ ಗಿಡಗಳನ್ನು ಸವರಿ ಅಧಿಕಾರಿಗಳು ತಾವು ಬೆಳೆಸಿದ್ದೆಂದು ಹೇಳಿಕೊಳ್ಳುತ್ತಿದ್ದಾರೆ, ಅಷ್ಟೆ. ಬೇಕಾದರೆ ತಾವು ಯಾವುದಾದರೂ ಮರಕ್ಕೆ ಗುರುತು ಹಚ್ಚಿ ಪರೀಕ್ಷೆಮಾಡಿ ನೋಡಿ. ಆದ್ದರಿಂದ ಎಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲವೋ ಅದನ್ನು ಸಾಗುವಳಿಗೆ ಕೊಡುವುದು ಒಳ್ಳೆಯದು. ಇನ್ನೊಂದು ಉಪಾಯವನ್ನು ಕೂಡ ಸರ್ಕಾರದವರು ಮಾಡುತ್ತಿದ್ದಾರೆ. ಕೆಲವು ರೈತರಿಗೆ ಜಮೀನು ಕೊಡುವುದಾಗಿ ಹೇಳಿ, ಅವರು ಮೊದಲು ವರ್ಷ 60 ಅಡಿಗೆ ಒಂದು ಸಸಿ ನೆಟ್ಟು ಬೆಳೆಸಬೇಕು. 2ನೆಯ ವರ್ಷ 30 ಅಡಿಗೆ ಒಂದು ಸಸಿ ಬೆಳೆಸಬೇಕು. ಇಷ್ಟು ಮಾಡಿ ಬೆಳೆಸಿದ್ದನ್ನು ಬಿಟ್ಟುಕೊಟ್ಟರೆ ಅವನಿಗೆ ಸ್ವಲ್ಪ ಜಮೀನು ಕೊಡುತ್ತಾರೆಂದು ಹೇಳುತ್ತಾರೆ. ಈ ರೀತಿ ಬಡವರ ಹೆಸರಿನಲ್ಲಿ ದೊಡ್ಡವರು ತಮ್ಮ ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಇಂಥದಕ್ಕೆ ಅವಕಾಶ ಕೊಡಬಾರದು. ಬೆಳೆಸಬೇಕೆಂದಿದ್ದರೆ ಕಷ್ಟಪಟ್ಟು ಮಾಡಲಿ. ಅರಣ್ಯ ಸಂಪತ್ತು ನಮಗೆ ಬೇಕು ನಿಜ. ಅದು ಸಾಧ್ಯವಿಲ್ಲದಿದ್ದರೆ ರೈತನಿಗೆ ಜಮೀನನ್ನು ಸಾಗುವಳಿಗೆ ಕೊಡಿ. ರೈತನು ತಾನೆ ಅಲ್ಪ ಸ್ವಲ್ಪ ಮರಗಳನ್ನು ಹಾಕಿ ಬೆಳೆಸುತ್ತಾನೆ. ಅದೇ ಒಂದು ರೀತಿಯಲ್ಲಿ ಅರಣ್ಯ ಬೆಳೆಸಿದಂತಾಗುತ್ತದೆ. ಇಷ್ಟು ಹೇಳಿ, ಪಶುಪಾಲನೆಯ ವಿಷಯದಲ್ಲಿ ಬೋರಣ್ಣಗೌಡರ ಕಮಿಟಿಯವರು ದೇಶದ ನಾನಾ ಕಡೆ ಸುತ್ತಾಡಿ, ಕೊಟ್ಟಿರುವ ರಿಪೋರ್ಟಿನ ಪ್ರಕಾರ ತಳಿಗಳ ಅಭಿವೃದ್ಧಿಯ ಕಡೆಗೆ ಗಮನಕೊಡಬೇಕೆಂದು ಕೇಳುತ್ತೇನೆ. ಆದಷ್ಟು ಜಾಗ್ರತೆ ಉತ್ತಮ ತಳಿ ನಮ್ಮ ದೇಶದಲ್ಲಿಯೇ ಇರುವಂತೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಇನ್ನು ಹತ್ತಾರು ವರ್ಷಗಳಲ್ಲಿ ಒಳ್ಳೆಯ ಎತ್ತುಗಳು ದನಗಳು ನಮ್ಮ ದೇಶದಲ್ಲಿ ಸಿಕ್ಕುವುದಿಲ್ಲ. ಪರದೇಶಗಳಿಂದ ತರಿಸಬೇಕಾದ ಸಂದರ್ಭ ಬರುತ್ತದೆ. ಆದ್ದರಿಂದ ಈಗ ದುಡ್ಡು ಖರ್ಚಾದರೂ ಚಿಂತೆಯಿಲ್ಲ. ಈ ಕಾರ್ಯವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಹಳ್ಳಿಗಳಲ್ಲಿ ಅನೇಕರು ಹಾಲಿನ ತಳಿಗಳನ್ನು ಅಪೇಕ್ಷಿಸುತ್ತಿದ್ದಾರೆ. ಸಾಕಾದಷ್ಟು ಸಪ್ಲೈ ಮಾಡುವುದಕ್ಕೆ ನಮ್ಮಿಂದ ಆಗುತ್ತಿಲ್ಲ. ಅಲ್ಲದೆ ಯಾರು ಎಂದೂ ದನಗಳನ್ನೇ ಸಾಕಿಲ್ಲವೋ, ಯಾರು ದೊಡ್ಡ ಮನುಷ್ಯರೋ ಅಂಥವರಿಗೆ ಹತ್ತು ಹದಿನೈದು ದನಗಳನ್ನು ಕೊಡುತ್ತಿದ್ದಾರೆ. ಒಂದು ದಿನವೂ ದನಗಳ ಮೈತೊಳೆಯದ ಜನಗಳಿಗೇ ಕೊಡಲಾಗುತ್ತಿದೆ. ಅದಕ್ಕೆ ಬದಲು ನಿಜವಾಗಿ ಹಳ್ಳಿಯಲ್ಲಿ ವಾಸಮಾಡುವ ಬಡ ರೈತರಿಗೆ ಕೊಟ್ಟರೆ ದೇಶಕ್ಕೆ ಹೆಚ್ಚು ಪ್ರಯೋಜನವಾಗುತ್ತದೆ. ಈ ವಿಷಯಕ್ಕೆ ಸರ್ಕಾರದವರು ಗಮನಕೊಡುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ರಾಮಯ್ಯ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ, ಈಗ ನಾವು ಚರ್ಚೆ ಮಾಡುತ್ತಿರುವ ವ್ಯವಸಾಯ, ಕೋಆಪರೇಷನ್, ಪಶುಪಾಲನೆ, ಇವುಗಳಿಗೆ ಸಂಬಂಧಪಟ್ಟ ಈ ಡಿಮಾಂಡು ಬಹಳ ಪ್ರಾಮುಖ್ಯವಾದುದು. ನಮ್ಮ ದೇಶ ವ್ಯವಸಾಯದಿಂದಲೇ ಜೀವನ ಮಾಡತಕ್ಕ ದೇಶವಾಗಿದೆ. ಹೀಗಿರುವಲ್ಲಿ ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದ ಮರುದಿನದಲ್ಲಿ ತಾವು ದೇಶವನ್ನು ಸ್ವಾವಲಂಬನೆಯ ಕಡೆಗೆ ಒಯ್ಯುತ್ತೇವೆಂದು ಹೇಳಿದರು. ಅದಾಗಿ ಹತ್ತು ವರುಷಗಳಾದುವು. ಇವತ್ತಿಗೂ ಇವರು ಸಾಕಾದಷ್ಟು ಆಹಾರ ಬೆಳೆಯುವ ಸ್ಥಿತಿಯಲ್ಲಿಲ್ಲ. ಆಹಾರಕ್ಕೆ ಇಂದು ನಾವು ಹೊರದೇಶ ನೋಡಬೇಕಾಗಿದೆ. ಇದು ನಾಚಿಕೆಗೇಡಿನ ಪರಿಸ್ಥಿತಿ. ಇದನ್ನು ಸುಧಾರಿಸಬೇಕಾದ್ದು

(ಶ್ರೀ ಬಿ. ರಾಮಯ್ಯ)

ಅಗತ್ಯ. ಸದ್ಯಕ್ಕೆ ಈ ಇಲಾಖೆಗೆ ತರುಣರೇ ಮಂತ್ರಿಗಳಾಗಿದ್ದಾರೆ. ಬಹಳ ಉತ್ಸಾಹದಿಂದ ಅವರು ಅಧಿಕಾರಕ್ಕೆ ಬಂದ ತರುಣದಲ್ಲಿ "ನಾನು ಈ ಇಲಾಖೆಯನ್ನು ಉತ್ತಮಪಡಿಸುತ್ತೇನೆ, ಆಹಾರ ಹೆಚ್ಚಿಗೆ ಬೆಳೆಸುತ್ತೇನೆ" ಎಂದಿದ್ದರು. ಅವರು ಮೊನ್ನೆ ಮಾತನಾಡುವಾಗ, ಎರಡನೆಯ ಪಂಚವಾರ್ಷಿಕ ಅಂತ್ಯದ ವೇಳೆಗೆ ನಮ್ಮ ದೇಶಕ್ಕೆ ಸಾಕಾಗುವಷ್ಟು ಆಹಾರ ಬೆಳೆಸುವವರಾಗಿದ್ದೇವೆ ಎಂದು ಹೇಳಿದರು. ಇದು ಕಾರ್ಯಗತವಾಗುತ್ತದೆಯೋ ಇಲ್ಲವೋ ಹಾಗೆಯೇ ಉಳಿಯುತ್ತದೆಯೋ ಕಾದುನೋಡಬೇಕು. ಈ ದೃಷ್ಟಿಯಿಂದ ಟೆನೆನ್ಸಿ ಕಾನೂನು ಕೂಡ ಜಾರಿಗೆ ತಂದರು. ಇದರಿಂದಾಗಿ ಆಹಾರ ಹೆಚ್ಚಿಗೆ ಬೆಳೆಯಲಿಲ್ಲ. ಲಿಟಿಗೇಷನ್ ಜಾಸ್ತಿಯಾಯಿತಷ್ಟೆ. ರೈತರಿಗೂ ಜಮೀನ್ದಾರರಿಗೂ ವ್ಯಾಜ್ಯ ಬೆಳೆಯಿತು. ಲಾಯರುಗಳಿಗೆ ಸಂಪಾದನೆಗೆ ಮಾರ್ಗವಾಯಿತು. ಅಮಲ್ದಾರರ ಕೋರ್ಟು, ಮುನಿಸೀಫರ ಕೋರ್ಟು, ಎಲ್ಲದರ ಪಂಚಾಯ ರೈತರಿಗೆ ಆದಂತಾಯಿತು ಅಷ್ಟೆ. ಇದರಿಂದೇನೂ ಪ್ರಯೋಜನ ಕಂಡುಬಂದಿಲ್ಲ. ಈಗ ಸರ್ಕಾರದವರು ಇಷ್ಟು ಮಾಡಬಹುದು. ಸರ್ಕಾರದವರೇ ಹೇಳಿರುವಂತೆ ನಮ್ಮ ದೇಶದಲ್ಲಿ 10 ಲಕ್ಷ ಜಮೀನು ಸಾಗುವಳಿಗೆ ಕೊಡಬಹುದಾಗಿದೆ. ಅದಲ್ಲದೆ ಫಲವತ್ತಾದ ಇಚಲವನಗಳಿವೆ. ಈಗ ಪಾನನಿರೋಧ ಜಾರಿಗೆ ಬಂದ ಮೇಲೆ ಈ ಜಮೀನುಗಳನ್ನು ಜಾತಿಭೇದಗಳಿಲ್ಲದೆ ಎಲ್ಲರಿಗೂ ಹಂಚಿರಿ. ಹೀಗೆ ಮಾಡಿದ್ದಾದರೆ ನಮ್ಮ ದೇಶದಲ್ಲಿ ಆಹಾರ ಹೆಚ್ಚಿಗೆ ಬೆಳೆಯಲು ಅವಕಾಶವಾದೀತು ಎಂದು ಹೇಳಬಯಸುತ್ತೇನೆ.

ವ್ಯವಸಾಯದ ಇಲಾಖೆಯಲ್ಲಿ ಡೈರೆಕ್ಟರು ಇದ್ದಾರೆ. ಇಬ್ಬರು ಜಾಯಿಂಟ್ ಡೈರೆಕ್ಟರ್ಸ್ ಇದ್ದಾರೆ. ಇನ್‌ಸ್ಪೆಕ್ಟರುಗಳು ಇದ್ದಾರೆ, ಎಲ್ಲರೂ ಇದ್ದಾರೆ ಅಂತೂ ನಮ್ಮ ದೇಶದಲ್ಲಿ ಆಹಾರ ಮಾತ್ರ ಹೆಚ್ಚಾಗಲಿಲ್ಲ.

ಶ್ರೀ ಎಚ್. ರಾಚಯ್ಯ.--ತಾವು ಪ್ರಯತ್ನ ಮಾಡಿದರೆ ಏನು ಸಹಾಯಬೇಕಾದರೂ ಮಾಡುತ್ತೇವೆ.

ಶ್ರೀ ಬಿ. ರಾಮಯ್ಯ.—ಅದನ್ನೇ ಸ್ವಾಮಿ ತಾವು ಮಾಡಿ ಎಂದು ಹೇಳುತ್ತಾ ಇರುವುದು. ಹಿಂದಿನ ಸರ್ಕಾರ ಇದ್ದಾಗ ಅರ್ಧ ರೇಟ್‌ನಲ್ಲಿ ಕೆಮಿಕಲ್ ಗೊಬ್ಬರ ಕೊಡುತ್ತಿದ್ದರು. ಬತ್ತನೆ ಬೀಜಗಳನ್ನು ಕೊಡುತ್ತ ಇದ್ದರು. ನೀವು ಇವತ್ತಿನ ದಿವಸ ಏನೂ ಕೂಡ ಕೊಟ್ಟಿಲ್ಲ. ಒಂದು ರೂಪಾಯಿ ಕೊಟ್ಟು 1¼ ಸೇರು ಬತ್ತನೆ ಬೀಜ ತೆಗೆದುಕೊಳ್ಳಬೇಕು. ಹಿಂದೆ ಅವನಿಗೆ ಬಹಳ ಅನುಕೂಲ ಇತ್ತು. ಹಿಂದೆ 10 ರೂಪಾಯಿ ಇದ್ದ ಅಮೋನಿಯಂ ಸಲ್ಫೇಟು ಇವತ್ತಿನ ದಿನ 4 ರೂಪಾಯಿ ಆಗಿದೆ. ಸೊಸೈಟಿ ಮೂಲಕ ಸಪ್ಲೈ ಮಾಡುತ್ತೇವೆ ಎಂದು ಹೇಳುತ್ತೀರಿ. ಸೊಸೈಟಿಗೆ ವಹಿಸಿದ್ದೀರಿ. ಅದು ಬೇರೆ ಮಾರ್ಗದಲ್ಲಿ ವಿನಿಯೋಗವಾಗುತ್ತಾ ಇದೆ. ಪ್ರತಿಯೊಂದು ಬಾಬಿನಲ್ಲೂ ಹೀಗೇ ಆಗುತ್ತಾ ಇದೆ. ಗುಳ, ಗುದ್ದಲಿ ಸಪ್ಲೈ ಮಾಡುತ್ತೀರಿ. ಅದು ಪಕ್ಕದಲ್ಲಿರುವ ಅಂಗಡಿಯಲ್ಲಿ ಸಿಕ್ಕುತ್ತದೆಯೇ ವಿನಾ ಸೊಸೈಟಿಯಲ್ಲಿ ಸಿಕ್ಕುವುದಿಲ್ಲ. 1 ರೂಪಾಯಿನ ಗುಳಕ್ಕೆ 1½ ರೂಪಾಯಿ ಕೊಟ್ಟು ತೆಗೆದುಕೊಳ್ಳಬೇಕು. ನಿಮ್ಮವರು ಸೊಸೈಟಿಯಲ್ಲಿ ಇರುವುದರಿಂದಲೇ ಈ ರೀತಿ ಅನ್ಯಾಯ ನಡೆಯುತ್ತಾ ಇರುವುದು. ನಿಮ್ಮವರು ಎಂದರೆ ನಿಮ್ಮ ಪಾರ್ಟಿಗೆ ಸೇರಿದ ಭಕ್ತರು. ಸರಿಯಾಗಿ ತಿಳಿದವರು ಇದ್ದಿದ್ದರೆ ಹೀಗೆ ಅವ್ಯವಸ್ಥೆ ಆಗುತ್ತಾ ಇರಲಿಲ್ಲ.

ಡೆಮಾನ್‌ಸ್ಟ್ರೇಷನ್ ಮತ್ತು ಎಕ್ಸ್‌ಪೆರಿಮೆಂಟಲ್ ಫಾರಂಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಬೇಕು. ಹಾಗೆ ಮಾಡಿದರೆ ಪ್ರತಿಯೊಂದು ಹಳ್ಳಿಗೂ ಹೋಗಿ ಪ್ರತಿಯೊಬ್ಬ ರೈತನಿಗೂ ತಿಳುವಳಿಕೆ ಕೊಟ್ಟು ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತದೆ. ಜಪಾನ್ ಮಾದರಿ ಬೆಳೆ ಬೆಳೆಯುವ ಪ್ರಕಾರ ಏನು ಮಾಡಿದ್ದೀರಿ ಅದರಿಂದ ತೊಂದರೆ ಏನು ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಪ್ರತಿಯೊಂದು ತಾಲ್ಲೂಕಿನಲ್ಲೂ ಇಬ್ಬರು ಫೀಲ್ಡ್‌ಮನ್ ಮತ್ತು ಒಬ್ಬರು ಇನ್‌ಸ್ಪೆಕ್ಟರು ಇರುತ್ತಾರೆ ಅವರು ಎಲ್ಲಾ ಜಮೀನನ್ನು ಸೂಪರ್‌ವೈಸ್ ಮಾಡುವುದಕ್ಕಾಗುವುದಿಲ್ಲ. ಇಷ್ಟು ದೂರಕ್ಕೆ ನಾಟಿಹಾಕಿ ಹೀಗೆಮಾಡಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ನನ್ನ ಸಲಹೆ ಏನೆಂದರೆ ಎಲ್ಲಾ ತಾಲ್ಲೂಕಿನಲ್ಲೂ ಕೂಡ ನಾಟಿ ಹಾಕತಕ್ಕ ಜನಗಳನ್ನು ತಯಾರು ಮಾಡಿ, ರೈತರು ಎಲ್ಲಿಗೆ ಕೇಳುತ್ತಾರೆ ಅಲ್ಲಿಗೆ ಕಳುಹಿಸಿಕೊಡಬೇಕು ಆಗ ಜಪಾನ್ ಮಾದರಿ ಬತ್ತ ಬೆಳೆಯುವ ಕ್ರಮ ಯಶಸ್ವಿಯಾಗುತ್ತದೆ. ಜನಗಳಿಗೆ ಅನುಕೂಲವಾಗುತ್ತದೆ. ಸೀಡ ಫಾರಂ ಸ್ಥಾಪನೆ ಮಾಡಬೇಕೆಂದು ನಮ್ಮ ತಾಲ್ಲೂಕಿನಲ್ಲಿ ಸುಮಾರು ಎರಡು ವರ್ಷದಿಂದ ಕೇಳುತ್ತಾ ಇದ್ದೇವೆ. ನಮ್ಮಲ್ಲಿ ಸುಮಾರು 40 ಎಕರೆ ಫಲವತ್ತಾದ ಜಮೀನು ಇದೆ. ಮುದರಾನು ಸರ್ಕಾರದವರು ಎರಡನೇ ಯೋಜನೆಯಲ್ಲಿ 180 ಸೀಡ್‌ಫಾರಂಗಳನ್ನು ತೆಗೆದರು. ಇಲ್ಲಿ ನೀವು 52 ಫಾರಂಗಳನ್ನು ತೆಗೆದಿದ್ದೀರಿ. ಇನ್ನು ಎಷ್ಟು ತೆಗೆಯುತ್ತೀರಿ ಎಂಬುದು ಗೊತ್ತಿಲ್ಲ. ಪಾಂಡವಪುರಕ್ಕೆ ಒಂದು ಸೀಡ್‌ಫಾರಂ ಕೊಟ್ಟಿಲ್ಲ. ಅಲ್ಲಿ ಸೊಗಸಾದ ಜಮೀನು ಇದೆ. ಬತ್ತ ಆಗಲೀ, ರಾಗಿ ಆಗಲೀ, ಸೊಗಸಾದ ಬೀಜವನ್ನು ಒದಗಿಸಬೇಕು. ಆ ರೀತಿ ಒದಗಿಸಿದರೆ ಹೆಚ್ಚು ಆಹಾರ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ.

ಸ್ವಾಮಿ, ರೋಗಗಳ ಹಾವಳಿ ಬಹಳ ಹೆಚ್ಚಾಗಿದೆ. ನಮ್ಮ ಕಡೆ ಬತ್ತಕ್ಕೆ ಸ್ಟೆಂಬೋರರ್ಸ್‌ನಿಂದ ಬಹಳ ಲುಕ್ಸಾನಾಯಿತು. ಅದನ್ನು ನೋಡುವವರೇ ಇಲ್ಲ. ಮಿನಿಸ್ಟರಿಗೆ ಕಾಗದ ಬರೆದರೆ ಜವಾಬೇ ಇಲ್ಲ. ನಾನು ತಿಳಿಸಿದ ಒಂದು ತಿಂಗಳಾದ ಮೇಲೆ ಬಂದರು. ಎಲ್ಲಿ ತೋರಿಸುವುದು ? ಸ್ಟೆಂಬೋರರ್ಸ್‌ದಿಂದ ಶೇಕಡ 20 ರಷ್ಟು ಲುಕ್ಸಾನಾಗಿದೆ ಎಂದು ತಿಳಿದುಬಂದಿದೆ.

ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರುಗಳನ್ನು ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಇಡುವುದಕ್ಕೆ ವ್ಯವಸ್ಥೆ ಮಾಡಬೇಕು. ಅದನ್ನು ಕೊಡುವಾಗ ಹಾಕುತ್ತಿರುವ ರೇಟು ಬಹಳ ಹೆಚ್ಚು. ಹಿಂದೆ ಗಂಟೆಗೆ 8 ರೂಪಾಯಿ ಇತ್ತು. ಬುಲ್‌ಡೋಜರ್‌ಗೆ ಇವತ್ತಿನ ದಿವಸ ಗಂಟೆಗೆ 20 ರೂಪಾಯಿ ಮಾಡಿದ್ದೀರಿ ಎಂದು ವರ್ತಮಾನ ಇದೆ. ಬಡರೈತ ಅಥವಾ ಮಧ್ಯಮ ತರಗತಿಯ ರೈತ ಇದನ್ನು ತೆಗೆದುಕೊಂಡು ಉಪಯೋಗಿಸುವುದಕ್ಕೆ ಅವಕಾಶವಿಲ್ಲ. ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರುಗಳನ್ನು ಇಟ್ಟು ಯಾರು ಬೇಕಾದರೂ ಉಪಯೋಗಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಹೇಳುತ್ತೇನೆ.

ಈಗ B.Sc. (Ag.) ಪಾಸು ಮಾಡಿದವರಿಗೆ 100 ರೂಪಾಯಿ ಸಂಬಳವನ್ನು ಕೊಡುತ್ತೀರಿ, ಆದರೆ B.E. ಪಾಸು ಮಾಡಿದವರಿಗೆ 175 ರೂಪಾಯಿ ಸಂಬಳವನ್ನು ಕೊಡುತ್ತೀರಿ, ಈ ರೀತಿ ಮಾಡಿದರೆ ಕೆಲಸಮಾಡಲು ಉತ್ಸಾಹವಿರುವುದಿಲ್ಲ. ಆದ್ದರಿಂದ ಸ್ಕೇಲ್ಸ್ ಆಫ್ ಪೇ ಕನಿಷ್ಠಪಕ್ಷ B.Sc. (Ag.), ಪಾಸು ಮಾಡಿರುವವರಿಗೆ 150 ರೂಪಾಯಿ ಸಂಬಳ ಕೊಡಬೇಕು.

ಈಗ ಒಬ್ಬ ರೈತ ಒಂದು ಗಾಡಿಯನ್ನು ಮಾಡಿಸಬೇಕಾದರೆ 600 ರೂಪಾಯಿಗಳು ಬೇಕಾಗುತ್ತವೆ. ರೈತರಿಗೆ ಕಡಿಮೆ ಖರ್ಚಿನಲ್ಲಿ ಗಾಡಿಯನ್ನು ಮಾಡಿಸಿಕೊಡುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಫಾರೆಸ್ಟ್ ವಿಷಯ. ನಮ್ಮ ಕಡೆ ಫಾರೆಸ್ಟ್ ಇಲ್ಲ. ಆದರೂ ಆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಫಾರೆಸ್ಟ್ ಲ್ಯಾಂಡ್ ಅನ್ನು ವ್ಯವಸಾಯಕ್ಕೆ ರಿಲೀಜ್ ಮಾಡಬೇಡಿ. ಅದು ನಮ್ಮ ದೇಶದ ಆಸ್ತಿ. ನಮ್ಮ ಕಡೆ ಫಾರೆಸ್ಟ್ ಮಾಡಿಸಿಕೊಡುತ್ತೇವೆಂದು ಹೇಳಿ ಎರಡು ವರ್ಷ ಆಯಿತು.

ಶ್ರೀ ಕೆ. ಎಫ್. ಪಾಟೀಲ್.—ಈ ವರ್ಷ ನಿಮ್ಮ ಕೈಯಿಂದಲೇ ಗಿಡ ಹಾಕಿಸುತ್ತೇನೆ.

ಶ್ರೀ ಬಿ. ಚಾಮಯ್ಯ.—ಫಾರೆಸ್ಟ್‌ನಿಂದ ಕಳ್ಳಸಾಗಾಣಿಕೆಯಾಗುತ್ತಿದೆ, ಆದುದರಿಂದ ಅದನ್ನು ತಪ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೋಆಪರೇಷನ್ ವಿಷಯದಲ್ಲಿ ಬಹಳ ಅವ್ಯವಸ್ಥೆ ಇದೆ. ಎಷ್ಟೋ ಜನ ಸೆಕ್ರೆಟರಿಗಳು ದುಡ್ಡು ಹೊಡೆದುಬಿಟ್ಟು ಬಹಳ ಅವ್ಯವಸ್ಥೆ ಆಗಿದೆ. ನಾನು ಹಿಂದೆ ಪಾಂಡವಪುರದ ಕೋಆಪರೇಟಿವ್ ಸೊಸೈಟಿಯಲ್ಲಿ ಎಷ್ಟು ದುಡ್ಡು ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಎನ್ನುವ ವಿಷಯದಲ್ಲಿ ಪ್ರಶ್ನೆ ಕಳುಹಿಸಿದ್ದೆ. ಶ್ರೀ ನಿಜಲಿಂಗಪ್ಪನವರ ಕಾಲದಲ್ಲೇ ಅದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಇವೊತ್ತಿನವರೆಗೂ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ. ಕಾಂಗ್ರೆಸ್ಸಿಗೆ ಸೇರಿದ ಜನ 3 ಸಾವಿರ ರೂಪಾಯಿಗಳನ್ನು ಚಪಾವಣಿ ಮಾಡಿದರು. ಆ ದುಡ್ಡನ್ನು ವಸೂಲು ಮಾಡಿದರೋ ಏನೋ ಗೊತ್ತಿಲ್ಲ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

5 P.M.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ಅಧ್ಯಕ್ಷರೇ, ಈ ದಿವಸ ವ್ಯವಸಾಯ, ಅರಣ್ಯ, ಪಶು ಸಂಪತ್ತು, ಮತ್ತು ಸಹಕಾರ ಒಟ್ಟು ಈ ನಾಲ್ಕು ಡಿಮ್ಯಾಂಡುಗಳ ಮೇಲೂ ಕೇವಲ $3\frac{1}{2}$ ಗಂಟೆ ಕಾಲದಲ್ಲಿ ಎರಡು ಕೋಟಿ ಜನಗಳಿಗೆ ಆಗತಕ್ಕ ಕಷ್ಟಸುಖಗಳನ್ನು ಮಾತನಾಡಿ ಸರ್ಕಾರಕ್ಕೆ ತಿಳಿಸಿದರೆ ಸಾಕು ಎಂದು ಬಿಜನೆಸ್ ಅಡ್ವೈಜರಿ ಕಮಿಟಿ ತೀರ್ಮಾನ ಮಾಡಿದೆ. ಈ ತೀರ್ಮಾನ ಈಗಾಗಲೇ ಆಗಿರುವುದರಿಂದ ಅದರ ಮೇಲೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಬೃಹದ್ ಸಮಸ್ಯೆಯನ್ನು $3\frac{1}{2}$ ಗಂಟೆ ಕಾಲದಲ್ಲಿ ಚರ್ಚೆಮಾಡಿ ಮುಗಿಸುವುದೆಂದರೆ, ''ಬಂಜೆ ಬಲ್ಲಳೇ ಪ್ರಸವವೇದನೆಯ'' ಎಂದ ಹಾಗೆ, ಆಗುತ್ತದೆ. ಮಾತನಾಡುವ ಒಟ್ಟು ಕಾಲದಲ್ಲಿ ಅರ್ಧಕಾಲ ಆಡಳಿತ ಪಕ್ಷಕ್ಕೆ ಹೋಗುತ್ತದೆ. ಉಳಿದ ಅರ್ಧಕಾಲ ವಿರೋಧ ಪಕ್ಷಕ್ಕೆ ಸಿಕ್ಕುತ್ತದೆ ನನ್ನ ಮಿತ್ರರಾದಂಥ ಶ್ರೀ ವೀರೇಗೌಡರ ವಿಷಯವನ್ನು ಮಾತನಾಡುವುದಕ್ಕೆ ಹೋದರೆ, ಅವರು ಹುಟ್ಟು ಬೇಸಾಯಗಾರರು. ಆದರೂ ಕೂಡ ಸರ್ಕಾರದವರು ಈ ಬಾಬಿಗೆ ಒದಗಿಸಿರುವ ಹಣ ರೈತರ ಸಮಸ್ಯೆಗಳನ್ನು ಪರಿಹರಿಸಲು ಸಾಕಾಗಬಲ್ಲದೇ ಎಂಬ ಅರಿವು ಇದ್ದೂ ಸಹ ಪಕ್ಷದ ಕಟ್ಟಿಗೆ ಸಿಕ್ಕಿಬಿದ್ದು ಅಂಜಿ ಹೇಳಲಾರದವರಾಗಿದ್ದಾರೆ. ವಿಷಯಗಳನ್ನು ಬಿಚ್ಚಿ ಮಾತನಾಡುವುದಕ್ಕೆ ಹೋದರೆ ಪಕ್ಷದವರ ತಪ್ಪನ್ನೇ ಹೇಳಬೇಕಾಗುತ್ತದೆಂದು ಮನಸ್ಸಿಲ್ಲದ ಮನಸ್ಸಿನಲ್ಲಿ ಸುಮ್ಮನಾದರು. ಆದರೆ ಒಂದು ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಹಿಂದೂ ಧರ್ಮ, ಬೌದ್ಧ ಧರ್ಮ, ಕ್ರೈಸ್ತಧರ್ಮ ಇಸ್ಲಾಮ್ ಧರ್ಮ ಈ ಯಾವ ಧರ್ಮವೇ ಆಗಲೀ ಅನೀತಿಯನ್ನು ಪ್ರತಿಭಟಿಸಕೂಡದು ಎಂದು ಹೇಳಿಲ್ಲ. ವೀರೇಗೌಡರು ಯಾವ ಪಕ್ಷದಲ್ಲೇ ಇರಲಿ ಇರುವ ಲೋಪದೋಷಗಳನ್ನು ಎತ್ತಿ ಹಿಡಿಯುವುದರಲ್ಲಿ ವಿಫಲರಾದರು, ಎಂದು ವಿಷಾದದಿಂದ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಧರ್ಮಕ್ಕೂ ರಾಜಕೀಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮುಂದಾದರೂ ಕೂಡ ಯಾವುದಕ್ಕೂ ಕಟ್ಟು ಬೀಳದೆ ಏನು ಲೋಪದೋಷಗಳಿವೆಯೋ ಅವುಗಳನ್ನು ಎತ್ತಿ ಹಿಡಿಯುವುದರಲ್ಲಿ ಆತ್ಮ ಶಕ್ತಿಯನ್ನು ಸಂಪಾದನೆ ಮಾಡಿಕೊಳ್ಳಲಿ ಎಂದು ಹೇಳುತ್ತೇನೆ. ಈ ದೇಶದಲ್ಲಿರತಕ್ಕಂಥ ಎರಡು ಕೋಟಿ ಪ್ರಜಾ ಸಂಖ್ಯೆಯಲ್ಲಿ ಶೇಕಡಾ 76ರಷ್ಟು ಭಾಗ ಬೇಸಾಯ ವೃತ್ತಿಯಲ್ಲಿ ಇರುವವರು. ಈ ಬೇಸಾಯ ವೃತ್ತಿಯಲ್ಲಿ ಹೊಂದಿಕೊಂಡಿರತಕ್ಕ ಜನಗಳಿಗೆ ಕೊಟ್ಟಿರತಕ್ಕ ಹಣದಿಂದ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಿದೆಯೇ ಎಂದು ನಾವು ನೋಡಿದರೆ ಇದರಿಂದ ಏನೇನೂ ಪ್ರಯೋಜನ ಆಗುವುದಿಲ್ಲ. ಬರೀ ಕಣ್ಣೊರೆಸುವುದಕ್ಕೆ ಎಷ್ಟು ಬೇಕೋ ಅಷ್ಟು ಇದೆಯೇ ಹೊರತು, ಬೇರೆ ಏನೂ ಇಲ್ಲ. ರೈತ ಹೆಚ್ಚಿನ ಮಟ್ಟದಲ್ಲಿ ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕಾದರೆ ಈಗ ಒದಗಿಸಿರತಕ್ಕ ಹಣ ಏನೇನೂ ಸಾಲದು ಎಂದು ಹೇಳಬೇಕಾಗಿದೆ. ಹಾಗೂ ಈಗ ಒದಗಿಸಿರತಕ್ಕ ಹಣದಲ್ಲಿ ದೊರೆಯುವ ಪ್ರಯೋಜನವೂ ಸಹ ವ್ಯವಸಾಯದಲ್ಲಿ ತೊಡಗಿರುವ ಸಾಮಾನ್ಯ ಜನಗಳಿಗೆ ಅನುಕೂಲ ಕಲ್ಪಿಸಿಕೊಡಬಲ್ಲದೇ ಎಂದು ನೋಡಿದರೆ, ಅದೂ ಕೂಡ ನಾನಾ ರೀತಿಯಲ್ಲಿ ನಾನಾ ಕೈಗಳು ಸೇರಿ ಯಾವ ದೃಷ್ಟಿಯಿಂದ ರೈತನ ಮನೆಯ ಬಾಗಿಲಿಗೆ ಹೋಗಬೇಕೋ ಆ ರೀತಿ ಹೋಗುತ್ತಿಲ್ಲ. ಅನ್ಯಾಯವಾಗುತ್ತಿರುವುದನ್ನು ಗಮನಕ್ಕೆ ತಂದರೆ ಬಗೆ ಹರಿಸುವುದರಲ್ಲಿ ಸರ್ಕಾರಕ್ಕೆ ಅಶ್ರದ್ಧೆ ಜಾಸ್ತಿ. ಮುಂದಾದರೂ ಹೇಳುವುದನ್ನು ಗಮನದಲ್ಲಿಟ್ಟು ರೈತನಿಗೆ ಆಗುವ ಅನ್ಯಾಯವನ್ನು ತಪ್ಪಿಸಿ ಎಂದು ಹೇಳುತ್ತೇನೆ. ವ್ಯವಸಾಯ ಸಚಿವರಿಗೆ ಒಂದಲ್ಲ ನಾಲ್ಕು ಸಾರಿ ಹೇಳಿದರೂ ಕೃತಕಗೊಬ್ಬರದ ಮಾರಾಟದ ವಿಷಯದಲ್ಲಿ ಸರಿಯಾದ ವ್ಯವಸ್ಥೆ ಮಾಡಿಲ್ಲ ಈ ಒಂದು ವ್ಯವಸ್ಥೆಯನ್ನು ಪೂರ್ಣವಾಗಿ ಸಹಕಾರ ಸಂಘಗಳಿಗೆ ವಹಿಸಬೇಕು. ಕೃತಕ ಗೊಬ್ಬರದ ಸೆಂಟ್ರಲ್ ಗೋಡೌನ್ ವ್ಯವಸಾಯದ ಇಲಾಖೆಯ ಜೊತೆಗೇ ಇರತಕ್ಕದ್ದು ನ್ಯಾಯವಾದುದಲ್ಲ, ಸಹಕಾರ ಸಂಘದ ಆಡಳಿತದಲ್ಲಿರಬೇಕು. ವ್ಯವಸಾಯದ ಸಲಕರಣೆಗಳನ್ನು ಒದಗಿಸಲು ಪೂರ್ಣವಾಗಿ ಸಹಕಾರ ಸಂಘಗಳಿಗೇ ಜವಾಬ್ದಾರಿ ಇರಬೇಕು. ಎಂದು ಹೇಳಿದಾಗ ವ್ಯವಸಾಯದ ಸಚಿವರು ನಾವು ಏರ್ಪಾಟು ಮಾಡುತ್ತೇವೆ. ಅದನ್ನು ಆದಷ್ಟು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರುತ್ತೇವೆ ಎಂದು ಭರವಸೆ ಕೊಟ್ಟರೂ ಆ ಒಂದು ಭರವಸೆ ವರ್ಷವರ್ಷಗಳು ಉರುಳಿದರೂ ಕಾರ್ಯಗತ ಮಾಡಲು ಅಶಕ್ತರಾಗಿದ್ದಾರೆ. ಹಿಂದಿನಿಂದ ಏನು ಪದ್ಧತಿ ನಡೆದುಕೊಂಡು ಬರುತ್ತಿದೆಯೋ ಈಗಲೂ ಕೂಡ ಅದೇ ಒಂದು ಪದ್ಧತಿ ನಡೆದುಕೊಂಡು ಬರುತ್ತಿದೆ. ಈ ಸಭೆಯಲ್ಲಿ ಕೊಟ್ಟ ಭರವಸೆಯನ್ನು ಪಾಲಿಸುವುದರಲ್ಲಿ ಎಷ್ಟರ ಮಟ್ಟಿಗೆ ಅಶಕ್ತರಾಗಿದ್ದಾರೆ ಎಂದು ಹೇಳಿದರೆ ಈ ಮಾನ್ಯ ಸಭೆಯ ಮುಂದೆ ಮಾನ್ಯ ವ್ಯವಸಾಯ ಸಚಿವರು ಇನ್ನು ಮುಂದೆ ಸಹಕಾರ ಸಂಘಗಳು ಕೆಲಸ ಮಾಡುವ ಕಡೆ ಕೃತಕ ಗೊಬ್ಬರವನ್ನು ಸಹಕಾರ ಸಂಘಗಳೇ ಮಾರಾಟ ಮಾಡ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಬೇಕೇ ವಿನಹ ಖಾಸಗೀ ವ್ಯಾಪಾರಸ್ಥರಿಗೆ ಅವಕಾಶವಿರಲಾರದೆಂದು ತಿಳಿಸಿದ್ದರು. ಆದರೂ ಆ ಭರವಸೆ ಖಾಲಿ ಭರವಸೆಯಾಗಿಯೇ ಉಳಿದಿದೆ. ದೇಶದಲ್ಲಿ ಅಮೋನಿಯಂ ಸಲ್ಫೇಟ್ ಉತ್ಪತ್ತಿ ಸಾಲದಿರುವುದರಿಂದ ಬೇರೆ ರೀತಿಯ ಕೃತಕ ಗೊಬ್ಬರವನ್ನು ಇಲಾಖೆಯವರು ಕೊಡುವ ತಿಳುವಳಿಕೆಯಂತೆ ಉಪಯೋಗಿಸಿದರೆ ಅಮೋನಿಯಂ ಸಲ್ಫೇಟ್‌ನಷ್ಟೇ ಪ್ರತಿಫಲ ದೊರಕುವುದೆಂದು ಇಲಾಖೆಯವರೆ ಆಜ್ಞೆಯಂತೆ ಸಹಕಾರ ಸಂಘಗಳು ರೈತರಿಗೆ ತಿಳುವಳಿಕೆ ಕೊಡಲು ಹೊರಟರೆ ಖಾಸಗೀ ವ್ಯಾಪಾರಿಗಳು ಬೇಕಾಗುವಷ್ಟು ಅಮೋನಿಯಂ ಸಲ್ಫೇಟ್ ಕೊಡುತ್ತೇವೆಂದು ರೈತನನ್ನು ಕರೆದು ಕಮ್ಮಿ ತೂಕವುಳ್ಳ ಮೂಟೆಗಳನ್ನು ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ ನಿಮ್ಮ ಸರ್ಕಾರದ ನೀತಿ ಈ ರೀತಿ ಇದ್ದರೆ ಸಹಕಾರ ಸಂಘಗಳ ಉಳಿವು ಮತ್ತು ರೈತರ ಬಾಳು ಹಸನಾಗಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು.

ಸರ್ಕಾರದ ಹಾಗೂ ಇಲಾಖೆಯು ಸೂಚನೆಯಂತೆ ತೆಗೆದುಕೊಂಡು ಕೃತಕ ಗೊಬ್ಬರ ಪ್ರಯೋಗ ಮಾಡಬೇಕೆಂದು ಒತ್ತಾಯ ಮಾಡಿದರೆ, ಬೇರೆ ಕಡೆ ಸುಲಭವಾಗಿ ಅಮೋನಿಯಂ ಸಲ್ಫೇಟ್ ಸಿಕ್ಕುತ್ತದೆ, ಹತ್ತು ರೂಪಾಯಿ ಹೆಚ್ಚಾದರೂ ಚಿಂತೆ ಇಲ್ಲ ಎಂದು ಹೇಳುವುದು ನಾನಾ ಕಡೆ ಇದೆ. ಈ ವಿಷಯವನ್ನು ಸಂಬಂಧಪಟ್ಟ ಸಚಿವರಿಗೂ ಹೇಳಿದ್ದೇನೆ. ಖಾಸಗಿಯಾಗಿ ವರ್ತಕರು ವ್ಯಾಪಾರ ಮಾಡುವುದನ್ನು ತಪ್ಪಿಸಬೇಕು, ಈಗಿನ ವ್ಯವಸ್ಥೆ ಸರಿ ಇಲ್ಲ. ಸಹಕಾರ ಸಂಘವೇ ಮಾರಾಟ ಮಾಡಲು ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಅನೇಕ ಸಾರಿ ಹೇಳಿದ್ದೇನೆ. ಹಿಂದೆ ಮಂತ್ರಿಗಳು ಕೊಟ್ಟಂಥ ಭರವಸೆಯನ್ನು ನೋಡಿದರೆ ಕೂಡಲೇ ಒಂದು ಆಜ್ಞೆಯನ್ನು ಹೊರಡಿಸುತ್ತಾರೆಂದು ಕಂಡಿತು. ಆ ಭರವಸೆ ಭರವಸೆಯಾಗಿ ಉಳಿದಿದೆಯೇ ಹೊರತು ಕಾರ್ಯರೂಪಕ್ಕೆ ಬರಲಿಲ್ಲ.

ಇನ್ನು ಈ ಸಭೆಯ ಕೆಲವರು ಸ್ನೇಹಿತರು ಇಲಾಖೆಯವರೇ ಕೃತಕ ಗೊಬ್ಬರದ ಮಾರಾಟ ಮಾಡಬೇಕು, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಹಂಚಬೇಕು ಎಂಬ ಅಭಿಪ್ರಾಯವನ್ನು ಸೂಚಿಸಿದರು. ಇಂಥ ಮಾತನ್ನು ಸಹ ಬಾಳ್ವೆಯ ಅನುಭವವಿಲ್ಲದೆ ಇರುವವರು ಹೇಳಬಹುದು. ಸಾಮಾನ್ಯ ಜನರ ಜೀವನ ಮಟ್ಟ ಹೆಚ್ಚಬೇಕಾದರೆ ಸಹಕಾರ ಸಂಘಗಳ ಮೂಲಕ ಮಾತ್ರ ಸಾಧ್ಯ. ಇದರಲ್ಲಿ ಕೆಲವು ಕಡೆ ಸಹಕಾರ ಸಂಘ ನಡೆಸುವವರಲ್ಲಿ ಲೋಪದೋಷಗಳಿರಬಹುದು. ಪ್ರಜಾ ಪ್ರಭುತ್ವ ತತ್ವಕ್ಕೆ ಹೊಂದಿಕೊಂಡಿರುವಾಗ, ಲೋಪದೋಷಗಳನ್ನು ಮಾಡಿದರೆ ಮುಂದಿನ ಚುನಾವಣೆಗಳಲ್ಲಿ ಅಂಥವರನ್ನು ತಪ್ಪಿಸತಕ್ಕ ಅಧಿಕಾರ ಸದಸ್ಯರಿಗೆ ಇದೆ. ಸಹಕಾರ ಸಂಘಗಳು ಬೆಳೆಯಬೇಕಾದರೆ ಮಧ್ಯವರ್ತಿ ಜನಗಳಿಗೆ ಕೊಡತಕ್ಕ, ಖಾಸಗಿಯ ವರ್ತಕರಿಗೆ ಕೊಡತಕ್ಕ ಅವಕಾಶವನ್ನ ಕಡ್ಡಾಯವಾಗಿ ತಪ್ಪಿಸಬೇಕು.

[MR. SPEAKER in the Chair.]

ವ್ಯಾಪಾರಗಾರರು ಬಹಳ ಬುದ್ಧಿವಂತರು. ಅವರು ಒಂದಲ್ಲ ಒಂದು ಮಾರ್ಗದಲ್ಲಿ ತಮ್ಮ ಗುರಿಯನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಖಾಸಗಿಯವರಿಗೆ ಅವಕಾಶ ಕೊಡುವುದಿಲ್ಲವೆಂದರೆ ಅವರು ಕೂಡಲೇ ಒಂದು ಸಹಕಾರ ಸಂಘವನ್ನು ಮಾಡಿಕೊಂಡು ಮುಂದಿನ ಬಾಗಿಲನಲ್ಲಿ ಹೋಗುವುದನ್ನು ಬಿಟ್ಟು ಹಿಂದಿನ ಬಾಗಿಲಲ್ಲಿ ಹೋಗುತ್ತಾರೆ. ವರ್ತಕರ ಸಹಕಾರ ಸಂಘವೆಂದು ಮಾಡಿಕೊಳ್ಳುತ್ತಾರೆ, ಮತ್ತು ಮೋಸದ ಗುರಿಯುಳ್ಳ ಅದಕ್ಕೆ ಪ್ರೋತ್ಸಾಹ ಸಿಕ್ಕುತ್ತದೆ. ಇಂಥ ವ್ಯವಸ್ಥೆ ಇರಬಾರದು. ಕಾಳಸಂತೆಯಲ್ಲಿ ಮಾರುವುದರಿಂದ ರೈತರಿಗೆ ಅನಾನುಕೂಲವಾಗುತ್ತದೆಂದು ಸಾರಿ ಸಾರಿ ಹೇಳುತ್ತಿದ್ದೇವೆ. ಆದರೂ ಸಹ ಇಂಥ ಜನ ಸೇರಿಕೊಂಡು ಒಂದು ಆಡಳಿತ ಮಂಡಲಿಯನ್ನು ರಚಿಸಿಕೊಂಡು ಸಹಕಾರ ಸಂಘವನ್ನು ಮಾಡಿಕೊಂಡಿದ್ದೇವೆಂದರೆ ಅವರಿಗೆ ಕೃತಕ ಗೊಬ್ಬರ, ಸಕ್ಕರೆ ಇಂಥ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಕೊಟ್ಟರೆ ಹಿಂದೆ ಇಂಗ್ಲಿಷಿನವರು ನಡೆಸುತ್ತಿದ್ದ ಆಡಳಿತಕ್ಕೂ ಈಗಿನ ಸರ್ಕಾರದ ಆಡಳಿತಕ್ಕೂ ಏನೂ ವ್ಯತ್ಯಾಸವಿಲ್ಲವೆಂದು ಹೇಳಬಹುದು. ನಿಜವಾದ ಸಹಕಾರ ಸಂಘಗಳು ಬೆಳೆಯಬೇಕು, ರೈತನಿಗೆ ಅದರಿಂದ ಅನುಕೂಲವಾಗಿ ಅವನ ಆರ್ಥಿಕಸ್ಥಿತಿ ಉತ್ತಮವಾಗಬೇಕು ಎನ್ನುವುದಾದರೆ ವರ್ತಕರು ಸೇರಿ ಸಹಕಾರ ಸಂಘಗಳನ್ನು ಮಾಡಿಕೊಂಡು ಅದರ ಮೂಲಕ ದೇಶದಲ್ಲಿ ಅಭಾವವಿರುವ ಪದಾರ್ಥಗಳನ್ನು ಪಡೆಯುವ ನೀತಿಯನ್ನು ಪೂರ್ಣವಾಗಿ ವಿರೋಧಿಸಿ ಅಂಥ ಸಂಘಗಳ ಬೆಳವಣಿಗೆಗೆ ಅಡ್ಡಿಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಂಡ್ಯದಲ್ಲಿ ವರ್ತಕರ ಸಹಕಾರ ಸಂಘ ಸ್ಥಾಪನೆಯ ವಿಷಯದಲ್ಲಿ ಮಾನ್ಯ ವೀರೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಹಿಂದೆ ಅನೇಕ ಸಾರಿ ಈ ವಿಷಯವನ್ನು ಹೇಳಿದ್ದೇನೆ. ಹಿಂದೆ ಕೃತಕ ಗೊಬ್ಬರ ಮಾರಾಟದಲ್ಲಿ ಕಳ್ಳಸಂತೆ ವ್ಯಾಪಾರ ಮಾಡುತ್ತಿದ್ದ ವರ್ತಕರೆಲ್ಲ ಈ ಸಂಘದ ಆಡಳಿತ ಮಂಡಲಿಯಲ್ಲಿದ್ದಾರೆ. ಅವರಿಗೆ ಖಾಸಗಿಯಾಗಿ ಕೃತಕ ಗೊಬ್ಬರ ಮಾರಾಟ ಮಾಡುವುದಕ್ಕೆ ಇಂದಿಗೂ ಲೈಸನ್ಸು ಇದೆ. ಇದರಲ್ಲಿ ರೈತರು ಯಾರೂ ಸದಸ್ಯರಾಗಿಲ್ಲ. ವರ್ತಕರ ಸಹಕಾರ ಸಂಘದವರು ಹಾಲಿ ರೈತರ ಸಹಕಾರ ಸಂಘ ಮಾರಾಟ ಮಾಡುತ್ತಿರುವ ಪದಾರ್ಥಗಳನ್ನು ಬಿಟ್ಟು ಬೇರೆ ಪದಾರ್ಥಗಳನ್ನು ಸುಲಭ ಬೆಲೆಗೆ ಮಾರಾಟ ಮಾಡಿ ಸೇವೆ ಮಾಡಲು ಪ್ರಯತ್ನಿಸಿದರೆ ನಿಜವಾಗಿ ಅಭಿನಂದಿಸುತ್ತೇನೆ. ಸಾಮಾನ್ಯವಾದ ಇತರ ಪದಾರ್ಥಗಳನ್ನು ತರಿಸುವ ಕಡೆ ಗಮನಕೊಡುವುದಿಲ್ಲ. ಸರ್ಕಾರದ ಗಮನಕ್ಕೆ ಈ ವಿಚಾರಗಳೆಲ್ಲ ಬಂದೂ ಸಹ ಈ ಸಹಕಾ ಸಂಘ ರಿಜಿಸ್ಟರಾಗಿದೆ ಎಂದು ನಾನು ಹೇಳಲಾರೆ. ಇದರಲ್ಲಿ ಜಿಲ್ಲಾಧಿಕಾರಿಗಳ ಪಾತ್ರ ವಿಶೇಷವಾಗಿದೆ. ನಾವೇನಾದರೂ ಅಧಿಕಾರದಲ್ಲಿದ್ದರೆ 24 ಗಂಟೆಗಳಲ್ಲ ಅವರನ್ನು ಕೆಲಸದಿಂದ ತೆಗೆದುಹಾಕುತ್ತಿದ್ದೆ. ಇವರಿಗೆ ಜನರ ಸೇವೆಮಾಡಬೇಕೆಂಬ ಮನೋಭಾವವಿಲ್ಲ. ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನು ಕರೆಸಿ ಈ ಸೊಸೈಟಿಯನ್ನು ರಿಜಿಸ್ಟರ್ ಮಾಡಿ ಎಂದು ಹೇಳಿ ರಿಜಿಸ್ಟರ್ ಮಾಡಿಸಿದರು. ಈ ಸೊಸೈಟಿಯನ್ನು ಹೇಗೆ ರಿಜಿಸ್ಟರ್ ಮಾಡಿದಿರಿ ಎಂಬ ಬಗ್ಗೆ ರಿಜಿಸ್ಟ್ರಾರ್‌ಅವರು explanation ಕೇಳಿದ್ದಾರೆ. ಹೀಗೆ ಒಬ್ಬರಿಗೆ ತೊಂದರೆಯುಂಟಾಗುವಂತೆ ಮಾಡಿ, ಸಂಘವನ್ನು ಸ್ಥಾಪನೆ ಮಾಡುವ ಕಾರಣವೇನಿತ್ತು ಎಂದು ಕೇಳುತ್ತೇನೆ. ಇವರಿಗೆ ಸಹಕಾರ ತತ್ವದಲ್ಲಿ ನಂಬಿಕೆ ಇದೆಯೇ, ಇವರು ಎಷ್ಟು ಮಾತ್ರ ವಿಷಯವನ್ನು ತಿಳಿದುಕೊಂಡಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಜಿಲ್ಲಾಧಿಕಾರಿಗಳ ಮುಂದೆ ನಾನಾ ಸಮಸ್ಯೆಗಳಿವೆ. ಅವರಿಗೆ ಪ್ರತಿಯೊಂದು ಸಮಸ್ಯೆಯನ್ನೂ ಬಗೆ ಹರಿಸತಕ್ಕ ಅಧಿಕಾರವಿರುತ್ತದೆ. ಅವರು ಯಾವ ಪಕ್ಷಕ್ಕೂ ಅಂಟಿಕೊಳ್ಳದೆ ಅಲ್ಲಿನ ಸಮಸ್ಯೆಗಳನ್ನು ಯಾವ ರೀತಿ

ಬಗೆಹರಿಸಬೇಕೆಂದು ಯೋಚನೆ ಮಾಡಬೇಕು. ನನಗೆ ಮಂತ್ರಿಗಳಾಗಿರುವ ಶ್ರೀ ರಾಚಯ್ಯನವರ ಬೆಂಬಲವಿದೆ, ನಾನು ಏನು ಮಾಡಿದರೂ ನಡೆಯುತ್ತದೆ, ಅವರ ಸಹಾಯವಿದೆ ಎಂದು ಹೇಳುತ್ತಾರೆ. ಶ್ರೀಮಾನ್ ರಾಚಯ್ಯನವರು ಆ ರೀತಿ ಹೇಳಿದ್ದಾರೆಂದು ನಾನಾದರೂ ಭಾವಿಸುವುದಿಲ್ಲ.

ಜಿಲ್ಲಾ ವ್ಯವಸಾಯ ಸಂಘದ ಸಮಾರಂಭ ಒಂದರಲ್ಲಿ ಅವರು ಭಾಗವಹಿಸ್ತಿದರು. ನಾನು ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದೆ. ಅವರು ಮಾತನಾಡುವಾಗ ಸಹಕಾರ ಬೇಸಾಯ ಪದ್ಧತಿಯನ್ನು ಜಾರಿಗೆ ತರಬೇಕೆಂದು ಸರ್ಕಾರ ಹೇಳುತ್ತಿದ್ದಾರೆ. ಹೇಳುವವರಿಗೆ ಅದರ ಪೂರ್ಣ ಪರಿಚಯವಾಗಿಲ್ಲ ಎಂದು ಹೇಳಿದರು. ಸರ್ಕಾರದ ಅಧಿಕಾರಿಯಾದ ಮೇಲೆ ಸರ್ಕಾರ ಹೇಳಿದ್ದನ್ನು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತರಲು ಅಧಿಕಾರಿಗಳು ಪ್ರಯತ್ನಪಡುತ್ತಿದ್ದಾರೆಂದು ತಿಳಿಯಬಹುದು. ಹೇಳುವವರಿಗೂ ಅನುಭವವಿಲ್ಲ. ನಮಗೂ ಕೂಡ ಅನುಭವವಿಲ್ಲವೆಂದು ಹೇಳಿದರು. ದೇಶಕ್ಕೆ ಅನುಕೂಲವಾಗಬಹುದಾದ ಒಂದು ನೀತಿಯನ್ನು ಸರ್ಕಾರ ಹಾಕಿದರೆ ಅದನ್ನು ಕಾರ್ಯಗತ ಮಾಡತಕ್ಕದ್ದು ಆ ಅಧಿಕಾರಿಯ ಕರ್ತವ್ಯ. ಅದಕ್ಕೆ ವಿರೋಧವಾಗಿ ಮಾತನಾಡಿದರೆ ಅಧಿಕಾರ ಸ್ಥಾನದಲ್ಲಿರಲು ಅವರು ಯೋಗ್ಯರೇ ಎಂದು ಪ್ರಶ್ನಿಸಬೇಕಾಗಿದೆ.

ಸಹಕಾರ ಸಂಘಗಳ ವಿಷಯದಲ್ಲಿ ಅನೇಕ ನಮ್ಮ ಸ್ನೇಹಿತರು ಮಾತನಾಡಿದರು. ನಾನು ಹಿಂದೆ ಇದೇ ಸಭೆಯಲ್ಲಿ ಒಂದು ಸಾರಿ ಹೇಳಿದೆ. ಮಂಡ್ಯ ರೈತರ ಸಹಕಾರ ಸಂಘದಿಂದ ಒಂದು ಅಕ್ಕಿ ಗಿರಣಿ ಮತ್ತು ಎಣ್ಣೆ ಗಿರಣಿ ಸ್ಥಾಪನೆ ಮಾಡಬೇಕೆಂದು ಎರಡು ಲಕ್ಷ ರೂಪಾಯಿಗಳ ಸಾಲವನ್ನು ಕೇಳಿದೆವು. ಆ ಹಣವನ್ನು ಮಂಜೂರು ಮಾಡಬೇಕಾದರೆ ಕೊನೆ ಘಳಿಗೆಯಲ್ಲಿ ಅದಕ್ಕೆ ಅಡ್ಡಿಪಡಿಸಿದರು ಮತ್ತು ಮಾನ್ಯ ಹಣಕಾಸಿನ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದರು. ಇವರಿಗೆ ಅದರಲ್ಲಿ ಎಷ್ಟರಮಟ್ಟಿಗೆ ಆಸಕ್ತಿ ಇತ್ತು ಎಂದರೆ ರಿಕಾರ್ಡಿನ ಹಿಂದೆಯೇ ಹೋಗಿದ್ದರು ಎಂದು ಏನೇನೋ ಹೇಳಿಬಿಟ್ಟರು: ಆ ಸಹಕಾರ ಸಂಘದಿಂದ ನನಗೆ ಎಷ್ಟರಮಟ್ಟಿಗೆ ಪ್ರಯೋಜನವಾಗಿದೆ. ನನ್ನ ಸ್ವಾರ್ಥಕ್ಕೆ ಏನು ಪ್ರಯೋಜನ ಹೊಂದಿದ್ದೇನೆಂಬುದನ್ನು ನನಗಾದರೂ ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಅವರೇ ಪರೀಕ್ಷೆ ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಜವಾಬ್ದಾರಿ ಸ್ಥಾನದಲ್ಲಿ ಕುಳಿತುಕೊಂಡು ಸಹಕಾರ ಸಂಘಗಳ ಬೆಳವಣಿಗೆಗೆ ಹಣ ಮಂಜೂರು ಮಾಡಬೇಕೆಂದು ಕೇಳಿದ ಕೂಡಲೇ ಯಾವುದೋ ಒಂದು ಆಸಕ್ತಿಯನ್ನು ವಹಿಸಿ ರಿಕಾರ್ಡ್ ಹಿಂದೆಯೇ ಬಂದರು ಎಂದು ಹೇಳಿದರು. ಅದರ ಹಿಂದೆ ಹೋಗಬೇಕಾದ ಅಗತ್ಯವೇಕೆ ಇತ್ತು ಎನ್ನುವುದನ್ನು ತಾವೇ ಯೋಚನೆಮಾಡಬೇಕು. ಸರ್ಕಾರದಿಂದ ಹಣವನ್ನು ಕೊಡದೇ ಇದ್ದರೂ, ಸ್ವಂತ ಶಕ್ತಿಯ ಮೇಲೆ ಅಕ್ಕಿ ಗಿರಣಿ ಮತ್ತು ಎಣ್ಣೆಯ ಗಿರಣಿಯ ಪ್ರಾರಂಭೋತ್ಸವವನ್ನು ನೆರವೇರಿಸಿದ್ದೇವೆ. ಸಹಕಾರ ಸಂಘಗಳಲ್ಲಿ ಯಾರು ಕೆಲಸ ಮಾಡುತ್ತಾರೆ. ಅವರು ಯಾವ ಪಕ್ಷದವರು ಯಾವ ಗುಂಪಿಗೆ ಸೇರಿದವರು ಎಂಬುದನ್ನು ನೋಡಬಾರದು. ಸಹಕಾರದ ಬೆಳವಣಿಗೆ ಹೆಚ್ಚಿನ ಕ್ಷೇತ್ರದಲ್ಲಿ ನಡೆದು ಸಾಮಾನ್ಯ ಜನರ ಜೀವನ ಮಟ್ಟವು ಹೆಚ್ಚಲು ನೆರವಾಗಲಿ ಎನ್ನುವ ಧ್ಯೇಯವನ್ನು ಇಡಬೇಕು; ಕ್ಷುಲ್ಲಕ ವಿಷಯಗಳಿಗೆ ಅವಕಾಶಕೊಡಬಾರದೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳುತ್ತೇನೆ.

ಸ್ವಾಮಿ, ವ್ಯವಸಾಯದಲ್ಲಿ ನನಗೆ ಬಹಳ ಆಸಕ್ತಿಯಿದೆ. ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಸಹಕಾರ ಸಂಘದ ಪಕ್ಕದಲ್ಲಿ ತಾಲ್ಲೂಕು ಆಫೀಸಿದೆ. ಆ ಆಫೀಸಿಗೂ ನಮ್ಮ ಸಹಕಾರ ಸಂಘಕ್ಕೂ ಮಧ್ಯೆ ಒಂದು ಖಾಲಿ ಜಾಗವಿದೆ. ಅಲ್ಲಿ ಒಂದು ಸಣ್ಣ ಸರ್ಕಾರಿ ಕಟ್ಟಡವಿದೆ. ಅಲ್ಲಿರುವ ಖಾಲಿ ಜಾಗದಲ್ಲಿ ಕಟ್ಟಡ ಕಟ್ಟಿದರೆ ನಮ್ಮ ವ್ಯವಸಾಯ ಸಂಘಕ್ಕೆ ಅನುಕೂಲ, ಈಗ ವ್ಯವಸಾಯದ ಇಲಾಖೆಯು ನಮ್ಮ ಸಂಘದ ಆಫೀಸು ಜನರು ವಾಸಮಾಡುವ ಕಟ್ಟಡಗಳ ಮಧ್ಯೆ ಇದೆ, ಆದುದರಿಂದ ಅವನ್ನು ಪತ್ತೆ ಮಾಡುವುದು ಕಷ್ಟ, ತಾಲ್ಲೂಕು ಆಫೀಸಿನ ಬಳಿ ಇರುವ ಖಾಲಿ ಜಾಗ ಸರ್ಕಾರಕ್ಕೆ ಸೇರಿದೆ, ಅದನ್ನು ಕೊಡಿ ಎಂದು ನಮ್ಮ ಸಂಘದ ಪರವಾಗಿ ಕೇಳಿದೆ. ಅಲ್ಲಿ ಕಟ್ಟಿದರೆ ರೈತರಿಗೆ ಅನುಕೂಲವಾಗುವಂತೆ ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ಕಟ್ಟಡ ಕಟ್ಟಲು ನಮ್ಮ ಸಂಘ ತೀರ್ಮಾನಿಸಿದೆ ಎಂದು ಕಾಗದ ಬರೆದೆ. ಆ ನಿವೇಶನ ಮರಾಮತ್ ಇಲಾಖೆಗೆ ಸೇರಿತ್ತು. ಶ್ರೀ ವೀರಣ್ಣಗೌಡರು ಆ ಖಾತೆಯ ಸಚಿವರಾಗಿದ್ದರು. ಅವರನ್ನು ಸದರಿ ಜಾಗವನ್ನು ಮುಫತ್ತಾಗಿ ಸಂಘಕ್ಕೆ ಕೊಡುವಂತೆ ಕೇಳಿದೆ. ಅದಕ್ಕೆ ಅವರು ಸಾಧ್ಯವಿಲ್ಲ, ಇಲಾಖೆಯವರು ಆ ಜಾಗಕ್ಕೆ ಬೆಲೆ ಕಟ್ಟುತ್ತಾರೆ, ಅದನ್ನು ಕೊಟ್ಟು ತೆಗೆದುಕೊಳ್ಳಿ ಎಂದು ಹೇಳಿದ್ದರು. ಆಮೇಲೆ 32 ಸಾವಿರ ರೂಪಾಯಿಗೆ ಕೊಡಬಹುದೆಂದು ಇಲಾಖೆಯವರೂ ಶಿಫಾರ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದರು. ಈ ಮಧ್ಯೆ ಬೇರೆ ಮಂತ್ರಿಮಂಡಲ ಬಂತು. ಮತ್ತೆ ಕಾಗದ ಬರೆದೆ. ಆದರೆ ಹೊಸ ಮಂತ್ರಿಮಂಡಲ ಸಂಘದ ಬೇಡಿಕೆಗೆ ಪುರಸ್ಕಾರ ಕೊಡಲಿಲ್ಲ. ಈ ದಿವಸ ಯಾವುದೋ ಬಡಾವಣೆಯಲ್ಲಿ ಸಂಸಾರಗಳ ಮನೆಗಳ ಮಧ್ಯದಲ್ಲಿ ನಮ್ಮ ಸಂಘದ ಆಫೀಸಿರುವುದರಿಂದ ಶೇಕಡ 75 ಮಂದಿಗೆ ಅದು ಸುಲಭವಾಗಿ ಗೊತ್ತಾಗುವಂತಿಲ್ಲ. ಇದರಲ್ಲಿ ಸ್ವಾರ್ಥವೇನಿದೆ? ನನ್ನ ಸ್ವಂತಕ್ಕಾಗಿ ನಾನೇನೂ ಕೇಳಿಲ್ಲ. ವ್ಯವಸಾಯದ ಸಂಘಕ್ಕಾಗಿ, ರೈತರ ಅನುಕೂಲಕ್ಕಾಗಿ ಕೇಳಿದೆ. ಈಗ ರೈತರು ಅಲ್ಲಿ ಕೆಲಸಕಾರ್ಯಗಳಿಗಾಗಿ ಬಂದು ಆ ಊರಲ್ಲಿ ರಾತ್ರಿ ತಂಗಿದರೆ ಎಲ್ಲೋ ಬೀಡಿ ಅಂಗಡಿ ಜಗಲಿಯ ಮೇಲೆ ಮಲಗಬೇಕಾಗಿದೆ, ಅದು ಸರಿಯಲ್ಲ. ನಮ್ಮ ಸಂಘಕ್ಕೆ ಸರಿಯಾದ ಕಟ್ಟಡವಿದ್ದರೆ ತಮ್ಮ ಸಂಘವೆಂದು ಮಮತೆಯಿಂದ ಆ ಕಟ್ಟಡದಲ್ಲಿ ರಾತ್ರಿ ಮಲಗಲು ಅನುಕೂಲವಾಗುತ್ತದೆ. ಅದಕ್ಕಾಗಿ ಜಾಗ ಕೇಳಿದರೆ ಅದಕ್ಕೆ ಸರ್ಕಾರದ ಪುರಸ್ಕಾರ ಸಿಕ್ಕಲಿಲ್ಲ. ಎಷ್ಟರಮಟ್ಟಿಗೆ ದೇಶದಲ್ಲಿ ವ್ಯವಸಾಯಗಾರರ ವಿಚಾರದಲ್ಲಿ ಆಸಕ್ತಿಯಿದೆಯೆಂಬುದನ್ನು ಈ ನಿದರ್ಶನ ನೋಡಿ ಸರ್ಕಾರ ನಿಧಾನವಾಗಿ ಯೋಚಿಸಿದರೆ ಸಾಕಾಗಿದೆ.

ಅರಣ್ಯದ ವಿಷಯದಲ್ಲಿ ಇದುವರೆಗೆ ಮಾತನಾಡಿದ ಮಾನ್ಯ ಮಿತ್ರರಿಗಿಂತ ನನಗೆ ಅಷ್ಟಾಗಿ ಆ ಬಗ್ಗೆ ಅನುಭವವಿಲ್ಲವೆಂದು ಹೇಳಬಯಸುತ್ತೇನೆ. ನಾನು ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಅರಣ್ಯದಿಂದ ಸೌದೆ ಸಾಗಿಸಲು ಖಾಸಗಿಯವರಿಗೆ ಕಂಟ್ರಾಕ್ಟ್ ಕೊಡುವಾಗ ತೇಗ, ಬೀಟೆ ಮುಂತಾದ ಮರಗಳನ್ನು ಕಡಿಯಕೂಡದೆಂಬ ನಿಯಮ ಹಾಕಿರುತ್ತಾರೆ. ಈಗ ದೊಡ್ಡ ದೊಡ್ಡ ಮರಗಳನ್ನು ಸಾಗಿಸಿದ ಮೇಲೆ ಸಣ್ಣ ಸಣ್ಣ ತುಂಡುಗಳೇನು ಉಳಿಯುತ್ತವೆ, ಅವಕ್ಕೆ ಬೆಂಕಿ ಹಚ್ಚುತ್ತಿದ್ದಾರೆ. ಅದಕ್ಕೆ ಬದಲಾಗಿ ಆ ತುಂಡುಗಳನ್ನು ಸಹಕಾರ ಸಂಘಗಳಿಗೆ ಒದಗಿಸಿದರೆ ಗಾಡಿಗಳಿಗೆ ಬೇಕಾದ ಹೊಟ್ಟೆಮರ ಮುಂತಾದ ಸಾಮಾನುಗಳಿಗೆ ಉಪಯೋಗಿಸಲು ಅವಕಾಶವಾಗುತ್ತದೆ ಎಂದು ಕೇಳುವಾಗ ಸರ್ಕಾರ ಅದಕ್ಕೆ ತಕ್ಕ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆಂದು ಸೂಚಿಸುತ್ತೇವೆ.

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಇನ್ನೊಂದು ವಿಷಯ. ಕಂಟ್ರಾಕ್ಟರುಗಳಿಗೆ ಕೊಡುವಾಗ ಬಹಳ ದೊಡ್ಡ ಬ್ಲಾಕ್ ಮಾಡಿಕೊಡುವುದರಿಂದ ಹಣವಂತರಿಗೆ ಮಾತ್ರ ಕೊಳ್ಳಲು ಅನುಕೂಲವಾಗುವುದೇ ಹೊರತು ಸಾಮಾನ್ಯ ಜನರಿಗೆ ಅವಕಾಶವಿರುವುದಿಲ್ಲ. ಇದಕ್ಕೆ ಬದಲಾಗಿ ಸಣ್ಣ ಸಣ್ಣ ಬ್ಲಾಕ್ ಮಾಡಿ ಸಾಮಾನ್ಯ ಜನರು ಕೊಳ್ಳಲು ಅವಕಾಶ ಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ರೆವೆನ್ಯೂ ಬರುವುದೂ ಅಲ್ಲದೆ ಎಲ್ಲರಿಗೂ ಸಹಾಯವಾಗುತ್ತದೆ. ಇದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಮತ್ತೊಮ್ಮೆ ಹೇಳುತ್ತೇನೆ.

ವ್ಯವಸಾಯ ಸಚಿವರಿಗೆ ಒಂದು ವಿಷಯ ತಿಳಿಸಬೇಕಾಗಿದೆ. ಹಿಂದೆ ಆಹಾರದ ವಿಷಯದಲ್ಲಿ ಕಂಟ್ರೋಲ್ ಇದ್ದಾಗ ಮಹಾತ್ಮ ಗಾಂಧಿಯವರು ಅದನ್ನು ತೆಗೆಯಿರಿ, ಕಂಟ್ರೋಲ್ ಜನರು ತಪ್ಪು ಮಾರ್ಗ ಹುಡುಕಲು ಸಹಾಯ ಮಾಡುತ್ತದೆ ಎಂದು ಹೇಳುತ್ತಿದ್ದರು.

ಕೃತಕ ಗೊಬ್ಬರ, ಅಮೋನಿಯಂ ಸಲ್ಫೇಟ್ ಮುಂತಾದ್ದನ್ನು ಸಹಕಾರ ಸಂಘಗಳ ಮೂಲಕ ಸರಬರಾಯಿ ಮಾಡದೆ ಖಾಸಗಿಯವರು ಮಾರಾಟ ಮಾಡಲು ಅವಕಾಶ ಕೊಡುವುದು ಸರಿಯಲ್ಲ. ಸಹಕಾರ ಸಂಘಗಳು ಮಾತ್ರ ಕೃತಕ ಗೊಬ್ಬರವನ್ನು ಹಂಚಬೇಕು, ಬೇರೆಯವರು ಮಾರಾಟ ಮಾಡುವಾಗ ಇಲಾಖೆಯ ನಿಯಮವನ್ನು ಉಲ್ಲಂಘಿಸಿದರೆ ಶಿಕ್ಷೆ ವಿಧಿಸಲಾಗುತ್ತದೆ ಎಂದು ಕಾನೂನು ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಲು ಇನ್ನು ಮುಂದಾದರೂ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸಹಕಾರ ಸಂಘಗಳ ಇಲಾಖೆ ಸಚಿವರಾದ ಶ್ರೀ ಮಾಲಿ ಮರಿಯಪ್ಪನವರು ನನ್ನ ಹಳೆಯ ಸ್ನೇಹಿತರು. ಅವರಿಗೆ ಪಾಂಡವಪುರ ಸಕ್ಕರೆ ಕಾರ್ಖಾನೆ ವಿಷಯ ಗೊತ್ತಿದೆ. ಆ ಕಾರ್ಖಾನೆಗೆ ಖಾಸಗಿಯ ಡೈರೆಕ್ಟರನ್ನು ನೇಮಿಸುವಾಗ ಬಹಳ ಯೋಚಿಸಿ ನೇಮಕ ಮಾಡಿ ಸಂಘದ ಬೆಳವಣಿಗೆಯಲ್ಲಿ ಆಸಕ್ತಿ ಇಲ್ಲದವರನ್ನು ನೇಮಿಸಿ ಸಂಘದ ಬೆಳವಣಿಗೆಗೆ ಕುಂದುಂಟು ಮಾಡಬೇಡಿ ಎಂದು ಸಾರಿ ಹೇಳಿದ್ದೆ. ಹೇಳಿದ್ದರೂ ಅದಕ್ಕೆ ಗಮನ ಕೊಡದೆ ಸಹಕಾರದ ಪ್ರಯೋಜನವನ್ನು ಸ್ವಾರ್ಥಕ್ಕೆ ಬಳಸುವವರನ್ನು ನೇಮಿಸಿ ಹೀಗಾಗಿ ಆ ಕಾರ್ಖಾನೆ ಹೆಚ್ಚು ದಿವಸ ನಡೆಯಲು ಅವಕಾಶವಿಲ್ಲದೆ ನಿಂತದ್ದು ಮಾನ್ಯ ಸಚಿವರಿಗೆ ಗೊತ್ತಿದೆ. ಈಗಿರುವ ಚುನಾಯಿತ ಡೈರೆಕ್ಟರುಗಳ ಮೇಲಾಗಲೀ ಅಥವಾ ಸರ್ಕಾರಿ ಅಧಿಕಾರಿಗಳ ಮೇಲಾಗಲೀ ನಾನು ಅಪಾದನೆ ಮಾಡುತ್ತಿಲ್ಲ. ಖಾಸಗಿಯವರನ್ನು ಸರ್ಕಾರ ನಾಮಕರಣ ಮಾಡುವಾಗ ಅವರಿಗೆ ಸಹಕಾರಿ ಕ್ಷೇತ್ರದಲ್ಲಿ ಎಷ್ಟು ಅನುಭವವಿದೆ, ಅಲ್ಲಿ ಎಷ್ಟು ಕಾಲ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ, ಅದರ ಮೇಲೆ ಎಷ್ಟು ಮಮತೆಯಿದೆ ಎಂದು ಯೋಚನೆ ಮಾಡಿ ನಾಮಕರಣ ಮಾಡಬೇಕೇ ಹೊರತು ಬೇಕಾದವರಿಗೆ ಅನುಭವವಿಲ್ಲದವರಿಗೆ ಅವಕಾಶಕೊಡಬಾರದು. ಸರಿಯಾದ ಜನರನ್ನು ಸೇರಿಸಲು ಪ್ರಯತ್ನ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಒಂದು ವಿಷಯ ಹೇಳಬೇಕಾಗಿದೆ. ಈಗ ನಮ್ಮ ಮುಂದಿರುವ ಡಿಮ್ಯಾಂಡುಗಳು ಬಹಳ ಮುಖ್ಯವಾಗಿರುವುದರಿಂದ ಒಂದು ದಿವಸ ಅವಕಾಶ ಕೊಟ್ಟಿರುವುದು ಸಾಲದು. ಇನ್ನೊಂದು ದಿವಸವಾದರೂ ಇದರ ಮೇಲಿನ ಚರ್ಚೆಗೆ ಅವಕಾಶ ಕೊಡಬೇಕು. ಎರಡನೆಯದು ಅಧ್ಯಕ್ಷರು ಪಿ. ಎಸ್. ಪಿ.ನವರು ಕೊಟ್ಟಿರುವ ಲಿಸ್ಟ್ ಫಾಲೋ ಮಾಡಬೇಕು. ನಮ್ಮ ಕಡೆಯವರು ಮಾತನಾಡಲು ಹೆಚ್ಚು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗಾಗಲೇ ಪಿ. ಎಸ್. ಪಿ.ಗೆ 55 ನಿಮಿಷಗಳ ಅವಕಾಶ ಕೊಡಲಾಗಿದೆ. 45 ನಿಮಿಷಗಳಿಗೆ ಬದಲಾಗಿ 55 ನಿಮಿಷಗಳನ್ನು ತೆಗೆದುಕೊಂಡು ಹತ್ತು ನಿಮಿಷಗಳು ಜಾಸ್ತಿ ಮಾತನಾಡಿದ್ದಾರೆ. ಅವಕಾಶವಿದ್ದರೆ ನೋಡೋಣ.

5-30 P.M.

†ಶ್ರೀಮತಿ ಚಂಪಾಬಾಯಿ ಬೋಗಲೆ(ಹುಕ್ಕೇರಿ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿನ ನಮ್ಮ ಮುಂದೆ ಮಂಡಿಸಿರತಕ್ಕ ವ್ಯವಸಾಯದ ಇಲಾಖೆಯ ಡಿಮ್ಯಾಂಡುಗಳನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ತಿಳಿಯಲಿಚ್ಛಿಸುತ್ತೇನೆ. ಈ ವ್ಯವಸಾಯದ ಇಲಾಖೆ ಬಹಳ ಮುಖ್ಯವಾದ ಇಲಾಖೆ ಎಂದು ಹೇಳಬೇಕಾಗಿದೆ. 1958-59ನೇ ಸಾಲಿನ ಬಡ್ಜೆಟ್ಟನ್ನು ಇಟ್ಟಾಗ ಡಿಸ್ಟ್ರಿಕ್ಟುವಾರಾಗಿ ಎಷ್ಟು ಹಣ ಇದರ ಸಲುವಾಗಿ ಒದಗಿಸಬೇಕೆಂದು ಹೇಳಿದ್ದೆ. ಮಂತ್ರಿಗಳು ತಮ್ಮ ಹೆಸರಿನ ಸಲುವಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ರಾಚಪ್ಪಾ ಗಿರಿಜನ ಕಾಲನಿಯೆಂದು ಮಾಡಿದ್ದಾರೆ. ಡಿಸ್ಟ್ರಿಕ್ಟುವಾರು ಸಬ್‌ಸಿಡಿಗಾಗಿ ಖರ್ಚು ಮಾಡದೆ ತಮ್ಮ ಹೆಸರಿನ ಸಲುವಾಗಿ ಎಲ್ಲ ಹಣವನ್ನು ಈ ರೀತಿ ಖರ್ಚು ಮಾಡಿದ್ದಾರೆ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಂದು ಹಚ್ಚದೆ ಇನ್ನು ಮುಂದೆ ಹರಿಜನರಿಗೆ ಸಬ್‌ಸಿಡಿ ಕೊಡುವಾಗ ಡಿಸ್ಟ್ರಿಕ್ಟುವಾರಾಗಿ ಕೊಟ್ಟು ಯೋಗ್ಯ ಖರ್ಚು ಆಗುವಂತೆ ಅಧಿಕಾರ ಸ್ಥಾನದಲ್ಲಿರುವವರು ವ್ಯವಸ್ಥೆ ಮಾಡತಕ್ಕದ್ದು ಅಗತ್ಯ. ಇನ್ನು ಮುಂದಾದರೂ ಆ ರೀತಿಯ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ನಮ್ಮ ಡಿಸ್ಟ್ರಿಕ್ಟಿನಲ್ಲಿ ಹತ್ತು ಹದಿನೈದು ಸಹಕಾರ ಸಂಘಗಳಿವೆ. ಬಹಳ ವರ್ಷಗಳಿಂದ ಈ ಸಹಕಾರ ಸಂಘಗಳಿದ್ದರೂ ಇವು ಸರಿಯಾಗಿ ಕೆಲಸ ಮಾಡುತ್ತಿವೆಯೇ ಎನ್ನುವುದನ್ನು ನೋಡಲಿಕ್ಕೆ ಯಾವ ಅಧಿಕಾರಿಗಳೂ ಇಲ್ಲಿಯವರೆಗೆ ಭೇಟಿ ಕೊಟ್ಟಿಲ್ಲ. ಈಚೆಗೆ ಮೈಸೂರು ಸ್ಟೇಟಾದ ಮೇಲೆ ಹರಿಜನರಿಗಾಗಿ ಹೆಚ್ಚಿನ ಹಣ ಖರ್ಚು ಮಾಡುತ್ತಿದ್ದೇವೆ ಮತ್ತು ಇವರನ್ನು ಉದ್ಧಾರ ಮಾಡುತ್ತೇವೆ ಎಂದು ಬರೀ ಬಾಯಲ್ಲಿ ಹೇಳುತ್ತಾರೆಯೇ ವಿನಾ ಯಾವುದನ್ನೂ ಕೃತಿಯಿಂದ ಮಾಡಿ ತೋರಿಸುತ್ತಿಲ್ಲ ಎಂದು ನಾನು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಅರಣ್ಯ ಇಲಾಖೆಯ ಬಗ್ಗೆ ಹೇಳುತ್ತ ಹರಿಜನರಿಗೆ ಮನೆ ಕಟ್ಟಲಿಕ್ಕೆ ಬೇಕಾಗುವ ಕಟ್ಟಿಗೆಯನ್ನು ಕೊಡಿಸಿಕೊಡಬೇಕೆಂದು ಕೇಳುತ್ತಿದ್ದರೂ ಫಾರೆಸ್ಟು ಡಿಪಾರ್ಟ್‌ಮೆಂಟಿನವರು ಸರಿಯಾಗಿ ಸಹಾಯ ಮಾಡುತ್ತಿಲ್ಲ. ಬಾಯಲ್ಲಿ ಮಾತ್ರ ಹಿಂದುಳಿದವರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಮ್ಮ ಭಾಗದಿಂದ ಸುಮಾರು ನೂರು, ನೂರಿಪ್ಪತ್ತು ಅರ್ಜಿಗಳನ್ನು ಕೋಆಪರೇಟೀವ್ ಸೊಸೈಟಿಯ ಬಗ್ಗೆ ಅರಣ್ಯ ಖಾತೆಯ ಬಗ್ಗೆ ಕೊಟ್ಟು ಪ್ರಶ್ನೆಗಳನ್ನು ಕೇಳಿದ್ದರೂ ಇದುವರೆಗೆ ಒಂದಕ್ಕಾದರೂ ಉತ್ತರವನ್ನು ಕೊಡದೇ ಇರುವುದು ಸರಿಯಲ್ಲ. ಈ ರೀತಿ ಅನ್ಯಾಯ ಮಾಡುತ್ತಿದ್ದಾರೆ. ಹರಿಜನರ ವಿಷಯದಲ್ಲಿ ಇಷ್ಟೊಂದು ಅರ್ಜಿ ಕೊಟ್ಟಿದ್ದರೂ, ಇದರ ಸಲುವಾಗಿ ಸರಕಾರ ಗಮನ ಕೊಟ್ಟಿಲ್ಲ. ಕೋಆಪರೇಟೀವ್

ಸೊಸೈಟಿಗಳಿಗೆ ಹಣವನ್ನು ಕೊಡುವಾಗ ಲೋನುಗಳಿಗಾಗಿ ಎಷ್ಟೋ ಹಣವನ್ನು ಹಂಚುತ್ತಾರೆ. ಹಣವನ್ನು ಹಂಚುವಾಗ ಡಿಸ್ಟ್ರಿಕ್ಟುವಾರಾಗಿ ಹಂಚುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಇಲ್ಲಿಯ ತನಕ ಹರಿಜನರಿಗೆ ಬಹಳ ತೊಂದರೆಗಳಾಗುತ್ತಿವೆ ಎಂದು 1958ನೇ ಇಸವಿಯಿಂದ ಎಷ್ಟೋ ಅರ್ಜಿಗಳನ್ನು ಕೊಟ್ಟು ಪ್ರಾರ್ಥಿಸಿಕೊಂಡರೂ ಇನ್ನೂ ಗಮನ ಕೊಟ್ಟಿಲ್ಲ. ಹರಿಜನರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಮತ್ತು ಇನ್ನಿತರ ತೊಂದರೆಗಳ ಬಗ್ಗೆ ಇಷ್ಟು ಅರ್ಜಿಗಳನ್ನು ಕೊಟ್ಟಿದ್ದರೂ ಇಲ್ಲಿಯವರೆಗೂ ಉತ್ತರ ಕೊಡದಿರುವುದನ್ನು ನೋಡಿ ಬಹಳ ವಿಷಾದವೆನಿಸುತ್ತದೆ. ಇದರ ಸಲುವಾಗಿ ಈ ಅರ್ಜಿಗಳು ಎಲ್ಲಿವೆ ಎಂಬ ಬಗ್ಗೆ ಉತ್ತರ ಕೊಡುವಾಗ ತಿಳಿಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಈಗಾಗಲೇ ಹರಿಜನರಿಗಾಗಿ ಹೌಸಿಂಗ್ ಕೋಆಪರೇಟಿವ್ ಸೊಸೈಟಿಗಳಾಗಿವೆ. ಹತ್ತು ವರ್ಷಗಳಿಂದ ಪ್ಲಾನಿನ ಪ್ರಕಾರ ನಮ್ಮ ಭಾಗಕ್ಕೆ ಮನೆ ಕಟ್ಟಲು ರೊಕ್ಕ ಕೊಡುತ್ತಿದ್ದಾರೆ. ಈ ರೊಕ್ಕವನ್ನು ಈ ಸಹಕಾರ ಸಂಘದವರ ಮೂಲಕ ಕೊಟ್ಟರೆ ಅನುಕೂಲವಾಗುತ್ತದೆ. ಈ ರೀತಿ ಕೊಡುವಂತೆ ರಿಜಿಸ್ಟ್ರಾರ್ರವರಿಗೆ ತಿಳಿಸಿ ಇನ್ನು ಮುಂದೆ ಹಣವನ್ನು ಹರಿಜನರ ಹೌಸಿಂಗ್ ಕೋಆಪರೇಟೀವ್ ಸೊಸೈಟಿಗಳ ಮೂಲಕ ಕೊಡಲು ವ್ಯವಸ್ಥೆ ಮಾಡಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ. ಸುರಾಪುರ ಹೌಸಿಂಗ್ ಸೊಸೈಟಿಗೆ 28,125 ರೂಪಾಯಿ ಸಾಲವೆಂದು ಮಂಜೂರು ಮಾಡಿದ್ದಾರೆ. ಸದರೀ ಸಂಘದ ಸಾಲದೊಳಗಿನಿಂದ ಕೆಲಸ ಪ್ರಾರಂಭ ಮಾಡಲು 5,000 ರೂಪಾಯಿ ಅಡ್ವಾನ್ಸು ಎಂದು ಕೊಡಲು ಅಸಿಸ್ಟೆಂಟು ರಿಜಿಸ್ಟ್ರಾರ್ರು, ಬೆಳಗಾವಿಯವರನ್ನು ಕೇಳಿದರೂ ಕೊಡಲಿಲ್ಲ. ಸದರಿ ರಕಂ 50,000 ಇಟ್ಟಿಗೆಗಳನ್ನು ಭಟ್ಟಿ ಹಾಕಲಿಕ್ಕೆ ಬೇಕಾಗಿದ್ದವು. ಹೀಗಾಗಿ ಹರಿಜನರ ಮೇಲೆ ಅನ್ಯಾಯವಾಗುತ್ತದೆ. ಹೌಸಿಂಗ್ ಸೊಸೈಟಿಗೆ ಕೊಟ್ಟ ಸಾಲವನ್ನು ಉಪಯೋಗ ಮಾಡಲು ಸಂಘದ ಜನರಿಗೆ ಅಧಿಕಾರವಿರತಕ್ಕದ್ದು. ಅಸಿಸ್ಟೆಂಟ್ ರಿಜಿಸ್ಟ್ರಾರರ ಪರವಾನಿ ಇಲ್ಲದೆ ಹಣ ತೆಗೆಯಬಾರದೆಂಬ ನಿಯಮವು ಸಂಘದ ಕಾರ್ಯಕ್ಕೆ ಬಹಳ ತೊಂದರೆಯಾಗುತ್ತದೆ. ಸಂಘದವರು ಸಾಲತೆಗೆದಿರುತ್ತಾರೆ. ಅದರ ಸಂಬಂಧ ಬಾಂಡು ಬರೆದು ಕೊಟ್ಟಿರುತ್ತಾರೆ. ಆದರೆ ಸದರಿ ಹಣವನ್ನು ಅವರು ಅಸಿಸ್ಟೆಂಟು ರಿಜಿಸ್ಟ್ರಾರು, ಕೋಆಪರೇಟೀವ್ ಸೊಸೈಟಿಯವರ ಒಪ್ಪಿಗೆ ಇಲ್ಲದೆ ಉಪಯೋಗ ಮಾಡಬಾರದೆಂಬ ನಿಯಮವು ಹರಿಜನರ ಕೆಲಸದಲ್ಲಿ ತೊಂದರೆ ಯಾಗುವುದು. ಹರಿಜನರ ಅಭಿವೃದ್ಧಿಗಾಗಿ ಸಾಲ ಕೊಡುತ್ತಾರೆ. ಇನ್ನೂ ಎಷ್ಟೋ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಹರಿಜನರ ಉದ್ಧಾರ ಮಾಡುತ್ತೇವೆಂದು ಬರೀ ಬಾಯಲ್ಲಿ ಹೇಳುತ್ತಿದ್ದಾರೆಯೇ ವಿನಹ ಇಲ್ಲಿಯವರೆಗೂ ಆ ರೀತಿ ಕೊಟ್ಟಿಲ್ಲ. ಸಬ್‌ಸಿಡಿಯೇನೋ ದೊರೆಯುತ್ತದೆ. ಇದರಸಲುವಾಗಿ ಡಿಸ್ಟ್ರಿಕ್ಟುವಾರಾಗಿ 1960-61ನೇ ಸಾಲಿನಲ್ಲಿ ಮಾಡಿರುವ ಬಡ್ಜೆಟ್ಟಿನಲ್ಲಿ ಕೊಡುವುದು ಸರಿಯಾಗಿ ಮುಟ್ಟುವಂತೆ ವ್ಯವಸ್ಥೆಯಾಗಬೇಕು. ಇನ್ನು ನಮ್ಮ ಕಡೆ ಡೈರಿ ಫಾರ್ಮಿಂಗಿಗಾಗಿ ಸಾಲವನ್ನು ಕೊಡುತ್ತಾರೆಂದು ಕೇಳಿದೆವು. ನಮ್ಮ ಜಿಲ್ಲೆಯಲ್ಲಿ ಮೂರು ಡೈರಿ ಫಾರ್ಮಿಂಗ್ ಸೊಸೈಟಿಗಳಿಗಾಗಿ ಎಷ್ಟೋ ಲೋನ್‌ನ ಅಪ್ಲಿಕೇಷನ್ನುಗಳನ್ನು ಕೊಟ್ಟಿದ್ದೆವು. ಅವು ಏನಾದುವೋ ತಿಳಿಯದು. ಅವೇನು ಕಸದ ಬುಟ್ಟಿಗೆ ಹೋಗುತ್ತದೋ ಏನೋ ನಮಗೆ ಗೊತ್ತಿಲ್ಲ. ಹರಿಜನರ ಅಭಿವೃದ್ಧಿಯಾಗುತ್ತದೆ ಎಂದು ಬಾಯಿಯಲ್ಲಿ ಹೇಳುತ್ತಿದ್ದಾರೆ. ಆದರೆ ಕಾರ್ಯದಲ್ಲಿ ಆಗುತ್ತದೆ ಎನ್ನುವುದರಲ್ಲಿ ನನಗೇನೋ ನಂಬಿಕೆ ಇಲ್ಲ.

ಸಾಧಾರಣವಾಗಿ 1958ನೇ ಇಸವಿಯಿಂದ ಸ್ಕಾಲರ್‌ಷಿಪ್ಪುಗಳನ್ನು ಹಂಚುವಾಗ ಮಾರ್ಚಿ 30ನೇ ತಾರೀಖಿನ ವೇಳೆಗೆ ಹಂಚುತ್ತಾರೆ. ಹೀಗೆ ಹಂಚಿದರೆ ಜನರಿಗೆ ಉಪಯೋಗವಾಗುವುದಿಲ್ಲ. ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಬಹಳ ತೊಂದರೆಯಾಗುತ್ತದೆ. ಹಿಂದೆ ಏನೋ ಹೀಗೆ ಆಗುತ್ತಿತ್ತು. ಈಗ ಮೈಸೂರು ವಿಶಾಲವಾದ ಮೇಲೆ ಹರಿಜನರಿಗೆ ಬಹಳ ಅನುಕೂಲವಾಗುತ್ತದೆ ಎಂದು ತಿಳಿದುಕೊಂಡಿದ್ದೆವು. ಆ ರೀತಿ ಆಗುತ್ತಿಲ್ಲ. ಸ್ಕಾಲರ್‌ಷಿಪ್ಪುಗಳನ್ನು ಇಲಾಖೆಯವರು ಹಂಚುವಾಗ ಸರಿಯಾದ ಕಾಲಕ್ಕೆ ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅಧ್ಯಕ್ಷರು ಅಪ್ಪಣೆ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಸ್ವಾಮೀ, ಇವೊತ್ತಿನ ದಿವಸ ಇರತಕ್ಕ ಡಿಮ್ಯಾಂಡುಗಳನ್ನು ಸಮರ್ಥನೆ ಮಾಡುತ್ತಾ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಅಗ್ರಿಕಲ್ಚರು ಡಿಪಾರ್ಟಮೆಂಟು ಬಹಳ ಮುಖ್ಯವಾದ ಇಲಾಖೆ ಎಂದು ಈಗಾಗಲೇ ಮಾತನಾಡಿದ ಸದಸ್ಯರೆಲ್ಲಾ ಸಭೆಯ ಮುಂದೆ ಹೇಳಿದ್ದಾರೆ. ಇಂಜಿನಿಯರಿಂಗು ಶಾಖೆಯ ಮೇಲೆ ಮಾತನಾಡುವಾಗ ಇಂಜಿನಿಯರುಗಳ ವಿಷಯ ತಿಳಿದಿರುವವರು ಮಾತ್ರ ಮಾತನಾಡುತ್ತಾರೆ. ಹಾಗೇ ಮೆಡಿಕಲ್ ಶಾಖೆಯ ಮೇಲೆ ಮಾತನಾಡುವಾಗ ಡಾಕ್ಟರುಗಳೇ ಹೆಚ್ಚಾಗಿ ಮಾತನಾಡುತ್ತಾರೆ. ಆದರೆ ಈ ಅಗ್ರಿಕಲ್ಚರಲ್ ಇಲಾಖೆಯ ವಿಚಾರವಾಗಿ ಮಾತನಾಡುವಾಗ ನಾವೆಲ್ಲರೂ ಮಾತನಾಡುತ್ತೇವೆ. ಈ ವ್ಯವಸಾಯದ ಇಲಾಖೆ ಅಷ್ಟು ಮುಖ್ಯವಾದುದೆಂದು ನಾನು ಹೇಳುತ್ತೇನೆ. ಇದನ್ನು ನಮ್ಮ ಸರಕಾರದವರು ಒಪ್ಪಿಕೊಳ್ಳುತ್ತಾರೆ. ಆಲ್ ಇಂಡಿಯಾ ಸೆಟ್ ಅಪ್‌ನಲ್ಲಿ ಈ ವ್ಯವಸಾಯದ ಇಲಾಖೆಯಲ್ಲಿ ಏನು ಮಾಡಬೇಕೆನ್ನುವುದರ ಬಗೆಗೆ ಸರಿಯಾದ ಯೋಜನೆಯನ್ನು ಇಟ್ಟುಕೊಂಡಿಲ್ಲ. ವ್ಯವಸಾಯಗಾರರ ಶೇಕಡಾವಾರುಗಳನ್ನು ಇತರ ದೇಶಗಳಲ್ಲಿ ನೋಡಿದರೆ, ಅಮೇರಿಕಾಕ್ಕೆ ಶೇಕಡಾ 50ರಷ್ಟು, ಇಂಗ್ಲೆಂಡಿನಲ್ಲಿ ಶೇಕಡಾ 25ರಷ್ಟು ಇದೆ. ರಷ್ಯಾದಲ್ಲಿ ಒಂದು ರೀತಿಯಾಗಿ ಇಟ್ಟುಕೊಂಡಿದ್ದಾರೆ. ನಮ್ಮಲ್ಲಿ ವ್ಯವಸಾಯಗಾರರು ಶೇಕಡಾ 75 ರಷ್ಟಿದ್ದಾರೆ. ಇದರಿಂದ ನಮ್ಮ ದೇಶದಲ್ಲಿ ಹೆಚ್ಚಿನ ಜನರು ವ್ಯವಸಾಯವನ್ನು ಅವಲಂಬಿಸಿದ್ದಾರೆ ಎಂದು ನನ್ನ ಮನಸ್ಸಿಗನಿಸುತ್ತದೆ. ದೇಶದ ಎಲ್ಲಾ ಮಂತ್ರಿಗಳು ಸಭೆ ಸೇರಿದಾಗ, ವ್ಯವಸಾಯ ಶಾಖೆಯ ಮಂತ್ರಿಗಳು ಶೇಕಡಾ 36ರಷ್ಟು ವ್ಯವಸಾಯಕ್ಕಾಗಿ ಖರ್ಚು ಮಾಡಬೇಕು, ಅದರಿಂದ ಹೆಚ್ಚಿನ ಆಹಾರ ಬೆಳೆಯಲು ಸಾಧ್ಯ ಎಂದು ಅಲ್ಲೆ ಒಪ್ಪಿಕೊಂಡು ಬಂದಿರುತ್ತಾರೆ. ಅದರಂತೆ ಮಂತ್ರಿಗಳು ತಾವು ವ್ಯವಸಾಯಕ್ಕಾಗಿ ಶೇಕಡಾ 36ರಷ್ಟು ಒದಗಿಸಲು ಒಪ್ಪಿ ಬಂದಿದ್ದೇವೆ ಮತ್ತು ಅದರಂತೆ ಮಾತು ಕೊಟ್ಟಿರುವುದರಿಂದ ಇಲ್ಲಿ ಅಷ್ಟು ಹಣವನ್ನು ಒದಗಿಸಿ ಹೆಚ್ಚು ಆಹಾರ ಉತ್ಪನ್ನ ಮಾಡಬೇಕೆಂದು ಇಲಾಖೆಯ ಅಧಿಕಾರಿಗಳ ಮುಂದೆ ಹೇಳಿದರೆ ಈ ಅಧಿಕಾರಿಗಳು ಮಂತ್ರಿಗಳು ಕೇಂದ್ರ ಸರಕಾರದಲ್ಲಿ ಒಪ್ಪಿಕೊಂಡು ಬಂದಂತೆ, ವಿವಿಧ ಸ್ಕೀಮುಗಳು ಹಾಕಿ ಈ ರೀತಿ ಫುಡ್ ಪ್ರೊಡಕ್ಷನ್ನನ್ನು ಜಾಸ್ತಿ ಮಾಡುತ್ತೇವೆಂದು ಹೇಳುತ್ತಾರೆ.

(ಶ್ರೀ ಜಿ. ಶಿವಪ್ಪ)

ಇನ್ನು ಎಲ್ಲಾ ವ್ಯವಸಾಯಗಾರರ ಮನೆಗೂ ಹೋಗಿ ವ್ಯವಸಾಯ ಇಲಾಖೆಯವರು ಸೌಕರ್ಯಗಳನ್ನು ಕಲ್ಪಿಸಬೇಕೆಂದರೆ ಸಾಧ್ಯವಿಲ್ಲ. ಸಾಮಾನ್ಯವಾಗಿ ವ್ಯವಸಾಯಗಾರನು ಖುದ್ದಾಗಿ ವ್ಯವಸಾಯ ಇಲಾಖೆಗೆ ಬಂದು ಒಳ್ಳೆಯ ಸೀಡ್ಸ್, ಗೊಬ್ಬರ ಮುಂತಾದುವನ್ನು ಅಲ್ಲಿಂದ ಪಡೆದು, ಬುಲ್‌ಡೋಜರ್ಸ್, ಕ್ಯಾಟಲ್‌ಗಳನ್ನು ಒದಗಿಸಿಕೊಂಡು ಅವನ್ನು ವ್ಯವಸಾಯದ ಬಗ್ಗೆ ಉಪಯೋಗ ಮಾಡಿಕೊಳ್ಳತಕ್ಕದ್ದು ಅವಶ್ಯಕ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇಲಾಖೆಯವರೇ ಎಲ್ಲಾ ಹಳ್ಳಿಗಳಿಗೂ ಹೋಗಿ ಸ್ಪ್ರೇ ಮಾಡತಕ್ಕ ಯೋಜನೆ ಏನಿದೆ, ಅದರಿಂದ ನಮ್ಮ ವ್ಯವಸಾಯೋತ್ಪನ್ನ ಜಾಸ್ತಿಯಾಗುತ್ತದೆಂಬ ಆಲೋಚನೆಮಾಡಿ ಅದನ್ನು ಪ್ರಾಕ್ಟಿಕಲ್ಲಾಗಿ ಜನರಲ್ಲಿ ಪ್ರಚಾರ ಮಾಡುವ ರೀತಿಯಲ್ಲಿ ಮತ್ತು ಉಪಯೋಗ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳುವುದು ಇಲಾಖೆಯ ಕರ್ತವ್ಯವಾಗಿದೆ. ಈ ರೀತಿ ಕೆಲಸ ಮಾಡುವುದಕ್ಕೆ ಅವರು ಏನು ಯೋಚನೆ ಮಾಡಿದ್ದರೂ ಅದು ಎಷ್ಟು ಸಮರ್ಪಕವಾಗಿ ಆಗಬೇಕೋ ಅಷ್ಟು ಸಮರ್ಪಕವಾಗಿ ಆ ಗುರಿಯನ್ನು ಮುಟ್ಟಿಲ್ಲವೆಂಬುದನ್ನು ಅವರು ಒಪ್ಪಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದ ತಜ್ಞರೂ ಸಹ ಈ ಬಗ್ಗೆ ಏನು ಹೇಳುತ್ತಾರೆಂದರೆ ನಮ್ಮ ದೇಶದಲ್ಲಿ ಫುಡ್ ಪ್ರೊಡಕ್ಷನ್ ಬಹಳ ಡಿಫಿಸಿಟ್ ಆಗಿದೆ. ಕೇವಲ ಶೇ. 10 ಅಥವಾ 15 ಭಾಗದಷ್ಟಿದೆ. ಆದ್ದರಿಂದ ಈ ಎರಡು ವಿಷಯಗಳನ್ನೂ ಸಂಪೂರ್ಣವಾಗಿ ದೇಶದಲ್ಲಿ ಜಾರಿಗೆ ತರಬೇಕು. ವ್ಯವಸಾಯಕ್ಕೆ ಒಳ್ಳೆಯ ಬೀಜಗಳನ್ನು ಉಪಯೋಗಿಸಬೇಕು. ಫಸಲಿಗೆ ತಗಲತಕ್ಕ ರೋಗಾದಿಗಳನ್ನು ಪ್ರಿವೆಂಟ್ ಮಾಡಬೇಕು. ಆಗ ನಮ್ಮ ಡಿಫಿಸಿಟ್ ಹೋಗುತ್ತದೆ, ಸಂಪೂರ್ಣವಾಗಿ ಸ್ವಶಕ್ತಿ ಬರುತ್ತದೆ ಎಂದೂ ಹೇಳಿದ್ದಾರೆ. ಆದ್ದರಿಂದ ಈ ಎರಡು ವಿಷಯಗಳನ್ನು ಪರಿಪೂರ್ಣವಾಗಿ ಸರ್ಕಾರದವರು ಗಮನದಲ್ಲಿಡಬೇಕು ಮತ್ತು ಜಾರಿಗೆ ತರಬೇಕು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರಿಗೆ ಸ್ವಲ್ಪ ತೊಂದರೆ ಇರಬಹುದು. ಏತಕ್ಕೋಸ್ಕರವಾಗಿ ಈ ವಿಷಯಗಳನ್ನು ಇಷ್ಟು ನಿಧಾನವಾಗಿ ತೀರ್ಮಾನಿಸುತ್ತಿದ್ದಾರೆಂಬುದನ್ನು ಯೋಚನೆ ಮಾಡಬೇಕಾಗಿದೆ. ಮಂತ್ರಿಗಳಿಗೆ ಕೆಲಸ ಮಾಡಬೇಕೆಂಬ ಉತ್ಸಾಹವಿದೆ. ಶ್ರೀಮಾನ್ ಎಂ. ಪಿ. ಪಾಟೀಲ್ ಅವರು ಹೇಳಿದಂತೆ ಮಂತ್ರಿಗಳಿಗೆ ಈ ವ್ಯವಸಾಯ ವಿಷಯದಲ್ಲಿ ಹೆಚ್ಚಿನ ಮಮತೆ ಬೇಕು. ಈ ಇಲಾಖೆ ಅವರಿಗೆ ಎರಡನೆಯ ಹೆಂಡತಿ ಇದ್ದ ಹಾಗೆ. ಆ ವಿಷಯದಲ್ಲಿ ಹೆಚ್ಚಿಗೆ ಪ್ರೀತಿ ಮಾಡಲಿ. ಆದರೆ ಹನಿಮೂನಾಗಿ ಇರುವುದು ಬೇಡ. Let that man and woman be a good husband and a good wife.

Sri M. MALLIKARJUNA SWAMY.—Monogamy is recognised, not bigamy nor polygamy.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇಲ್ಲಿ ಮೊದಲನೆಯ ಹೆಂಡತಿ, ಎರಡನೆಯ ಹೆಂಡತಿ ವಿಷಯ ಏತಕ್ಕೆ ಸ್ವಾಮಿ! ಆ ಆಲೋಚನೆ ಇಲ್ಲಿ ಮಾಡಬೇಡಿ.

ಶ್ರೀ ಜಿ. ಶಿವಪ್ಪ.—ಶ್ರೀಮಾನ್ ರಾಚಯ್ಯನವರಿಗೆ ಹೇಳುತ್ತಿದ್ದೇನೆ.

ಶ್ರೀ ಎನ್. ರಾಚಯ್ಯ.—ನನಗೆ ಆ ವಿಷಯ ಗೊತ್ತಿದೆ. ಎರಡನೆಯ ಹೆಂಡತಿ ಲಗ್ನವಾದ ಹಾಗೆ ನನಗೆ ವ್ಯವಸಾಯ ಇಲಾಖೆ ಸೇರಿದೆ. Naturally I must have all love and affection for my second lady, the Agriculture Department. That was what he was pleased to tell when Sri Mallaradhya intervened.

ಶ್ರೀ ಜಿ. ಶಿವಪ್ಪ.—ನಿಜವಾಗಿ natural love ನಿಮಗೆ ಅದರಲ್ಲಿ ಇದೆಯೆಂದು ಅದನ್ನೇ ಪ್ರೀತಿಮಾಡಿಕೊಂಡು ಬರಿಯ ಪ್ರೀತಿಯೊಳಗೇ ಕಾಲಹರಣ ಮಾಡುತ್ತಿದ್ದರೆ ಅದರಿಂದ ದೇಶಕ್ಕೆ ಏನು ಪ್ರಯೋಜನವಾದಂತಾಯಿತು? ಅವರ ಕಾರ್ಯ ಕಲಾಪಗಳನ್ನು ಪ್ರಯೋಗದಲ್ಲಿ ಕೂಡಲೇ ಜಾರಿಗೆ ತಂದು ದೇಶಕ್ಕೆ ಅನುಕೂಲವಾಗುವ ಕಾರ್ಯಕ್ರಮವನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ.

Sri M. MALLIKARJUNA SWAMY.—I say he has not divorced his first wife; his second wife is more attractive than the first wife.

ಶ್ರೀ ಜಿ. ಶಿವಪ್ಪ.—ಅದು ಬೇರೆ ವಿಷಯ. ಈ ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿನ ಬೆಳೆಯನ್ನು ನಿರೀಕ್ಷಣೆ ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಈಗ ಅನೇಕ ಸರ್ಕಾರೀ ಇಲಾಖೆಗಳಿವೆ. ಕೊ-ಆಪರೇಟಿವ್ ಇಲಾಖೆಗಳು, ವೆಟರಿನರಿ ಇಲಾಖೆಗಳು, ಮೈನರ್ ಇರ್ರಿಗೇಷನ್ ಇಲಾಖೆ— ಇವೆಲ್ಲವೂ ಒಂದಕ್ಕೊಂದು ಸೇರಿಕೊಂಡು ಕೆಲಸಮಾಡಬೇಕು. ಎಲ್ಲವನ್ನೂ ವ್ಯವಸಾಯ ಇಲಾಖೆಯೊಂದೇ ಮಾಡಿ ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಒಬ್ಬ ಅಗ್ರಿಕಲ್‌ಚರಲ್ ಇನ್‌ಸ್ಪೆಕ್ಟರ್ ಏನು ಸಂಪಾದನೆ ಮಾಡಬೇಕು, ಎಷ್ಟರಮಟ್ಟಿಗೆ ತನ್ನ ಜೀವನೋಪಾಯಕ್ಕಾಗಿ ದುಡಿಯಬೇಕೆಂಬುದನ್ನು ಯೋಚನೆ ಮಾಡುತ್ತಿರುತ್ತಾನೆ. ಆರೀತಿ ಇರುವಾಗ ಅಂತಹ ಇನ್‌ಸ್ಪೆಕ್ಟರುಗಳನ್ನು ಎಲ್ಲಾ ಕೆಲಸಗಳನ್ನೂ ನೀವೇ ನಿರ್ವಹಿಸಿರಿ ಎಂದು ಹೇಳಿದರೆ ಹೇಗೆ? ನಮ್ಮಲ್ಲಿ ಕೋ-ಆರ್ಡಿನೇಷನ್ ಎನ್ನುವುದೇ ಇಲ್ಲವೆಂಬುದನ್ನು ನಾನು ನೋಡಿದ್ದೇನೆ. ಮಂತ್ರಿಗಳಿಗೇ ಕೆಲವುವೇಳೆ ಕೊ-ಆರ್ಡಿನೇಷನ್ ಎನ್ನುವುದು ಇರುವುದಿಲ್ಲ. ತಾಲ್ಲೂಕ್ ಲೆವಲ್‌ನಲ್ಲಿ ಸಾಮಾನ್ಯವಾಗಿ ನೂರಾರು ಜನ ಆಫಿಸರುಗಳು ಇರುತ್ತಾರೆ. ಒಬ್ಬರಿಗೊಬ್ಬರಿಗೆ ಸಂಬಂಧವೇ ಇರುವುದಿಲ್ಲ. ಕೋಆಪರೇಟಿವ್ ಇನ್‌ಸ್ಪೆಕ್ಟರ್ ಕೋಆಪರೇಟಿವ್ ವೀಕ್ ಎಂದು ಓಡಾಡುತ್ತಿರುತ್ತಾನೆ, ಅಗ್ರಿಕಲ್‌ಚರಲ್ ಇನ್‌ಸ್ಪೆಕ್ಟರ್, ಅಗ್ರಿಕಲ್‌ಚರಲ್ ವೀಕ್ ಎಂದು ಓಡಾಡುತ್ತಿರುತ್ತಾನೆ, ವೆಟರಿನರಿ ಇನ್‌ಸ್ಪೆಕ್ಟರ್ ಗೋಸಂವರ್ಧನ ಸಪ್ತಾಹ ಎಂದು ಓಡಾಡುತ್ತಿರುತ್ತಾನೆ. ಇನ್ನು ಅರಣ್ಯ ಇಲಾಖೆಯವರೋ ವನಮಹೋತ್ಸವ ಎಂದು ಓಡಾಡುತ್ತಿರುತ್ತಾರೆ, ಇಂಜನಿಯರಿಂಗ್ ಮತ್ತು ಸರ್ವೆ ಇಲಾಖೆಯವರು ಮೈನರ್ ಇರ್ರಿಗೇಷನ್ ವೀಕ್ ಎಂದು ಓಡಾಡುತ್ತಿರುತ್ತಾರೆ. ಎನ್. ಇ. ಎಸ್. ಸ್ಕೀಮಿನ ಸೂಪರ್‌ವೈಜರ್ಸ್ ಮುಂತಾಗಿ ತಾಲ್ಲೂಕ್ ಲೆವಲಿನಲ್ಲಿ ನಲ್ಲಿ ಇಷ್ಟೊಂದು ಜನ ಆಫೀಸರ್‌ಗಳು ಇರುತ್ತಾರೆ. ಹೀಗಿರುವಾಗ ಜಿಲ್ಲಾ ಮತ್ತು ತಾಲ್ಲೂಕ್ ಲೆವಲಿನಲ್ಲಿರತಕ್ಕ ಎಲ್ಲಾ ಆಫೀಸರುಗಳು ಕೊ-ಆರ್ಡಿನೇಷನ್ ಮಾಡಿಕೊಂಡು ತಂತಮ್ಮ ಕೆಲಸಗಳನ್ನು ಪ್ಲಾನ್ ಪ್ರಕಾರ ಇಂಪ್ಲಿಮೆಂಟ್ ಮಾಡಿದರೆ, ರೈತರಿಗೆ ಮತ್ತು ಜನಗಳಿಗೆ ಹೆಚ್ಚಿನಮಟ್ಟಿಗೆ ಅನುಕೂಲವಾಗುತ್ತದೆ ಎಂದು ನನ್ನ ಆಶೆ ಇದೆ. ಹೀಗೆ ಕೋ-ಆರ್ಡಿನೇಷನ್ ಮಾಡುವ ದೃಷ್ಟಿಯಿಂದ ಸರ್ಕಾರದವರು ಯಾವಾವ ಕಾರ್ಯಕ್ರಮ ಗಳನ್ನು ಹಾಕಿಕೊಳ್ಳಬೇಕು ಎಂಬುದಕ್ಕೆ

ಗಮನಕೊಡಬೇಕು. ಅವರು ಅರೀತಿ ಪ್ರೋಗ್ರಾಮನ್ನು ಹಾಕಿಕೊಂಡು ಕೆಲಸಮಾಡುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಜಿಲ್ಲಾ ಮತ್ತು ತಾಲ್ಲೂಕ್ ಲೆವಲ್‌ನಲ್ಲಿರತಕ್ಕ ಪ್ರತಿಯೊಬ್ಬ ಆಫೀಸರ್ ಇಷ್ಟಿಷ್ಟು ಕೆಲಸಗಳನ್ನು ಮಾಡಬೇಕು ಎಂಬುವುದಾಗಿ ಒಂದು ಪ್ರೋಗ್ರಾಂ ಹಾಕಿಕೊಡಬೇಕು. ಅದನ್ನು ಬಿಟ್ಟು ಸ್ಪ್ರೆಮಾಡಿದಮಟ್ಟಿಗೆ ಹೆಲ್ತ್ ಇನ್ಸ್‌ಪೆಕ್ಟರ್ ಕೆಲಸವಾಯಿತು, ನಾಲ್ಕೈದು ಎತ್ತುಗಳ ಪರೀಕ್ಷೆಮಾಡಿದಮಟ್ಟಿಗೆ ವೆಟರಿನರಿ ಇನ್ಸ್‌ಪೆಕ್ಟರ್ ಕೆಲಸವಾಯಿತು ನಾಲ್ಕಾರು ಎತ್ತುಗಳನ್ನು ಕೊಟ್ಟು, ಯಾವುದೋ ಒಂದು ತರಹ ಸೀಡನ್ನು ಸಪ್ಲೈಮಾಡಿದರೆ ಅಗ್ರಿಕಲ್‌ಚರಲ್ ಇನ್ಸ್‌ಪೆಕ್ಟರ್ ಕೆಲಸವಾಯಿತು ಎಂದು ಹೇಳುವುದಲ್ಲ. ಇವರೆಲ್ಲರೂ ಒಟ್ಟಿಗೆ ಸೇರಿಕೊಂಡು ಕೆಲಸಮಾಡಬೇಕು. ತಾಲ್ಲೂಕ್ ಲೆವಲ್ಲಿನಲ್ಲಿ ಅವರಿಗೆ ಒಂದು ಪ್ರೋಗ್ರಾಂ ಕೊಡಬೇಕು. ಮುಖ್ಯವಾಗಿ ವ್ಯವಸಾಯಕ್ಕೆ ಬೇಕಾಗಿರತಕ್ಕ ಅನುಕೂಲಗಳನ್ನು ರೈತರಿಗೆ ಕಲ್ಪಿಸಿಕೊಡುವುದಕ್ಕೆ ಸಕಾರದವರು ಯೋಚನೆ ಮಾಡಬೇಕು ಎಂಬುದಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈಗ ನಡೆಯುವ ಕೋಆರ್ಡಿನೇಷನ್ ಮೀಟಿಂಗ್‌ಗೆ ನಾನು ಆಗಾಗ್ಗೆ ಹೋಗುತ್ತಿದ್ದೇನೆ. ಅದು ಆಗಿಂದಾಗ್ಗೆ ಮೀಟಿಂಗ್ ಸೇರುತ್ತಿರುತ್ತದೆ. ಈಗ ಅಫಿಷಿಯಲ್ ಕೋ-ಆರ್ಡಿನೇಷನ್ ಕಡೆ ಹೆಚ್ಚು ಗಮನ ಕೊಡಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಇಲ್ಲೀ ಕೋಆರ್ಡಿನೇಷನ್ ಇಲ್ಲ.

ಶ್ರೀ ಜಿ. ಶಿವಪ್ಪ.—ಒಟ್ಟಿನಲ್ಲಿ ತಾಲ್ಲೂಕ್ ಲೆವಲ್ ನಲ್ಲಿರತಕ್ಕ ಆಫೀಸರುಗಳಿಗೆಲ್ಲಾ ಸರಿಯಾದ ಒಂದು ವರ್ಕ್ ಪ್ರೋಗ್ರಾಂಕೊಡಬೇಕು.

ಇನ್ನು ಸಹಕಾರ ಇಲಾಖೆಗೂ, ವ್ಯವಸಾಯ ಇಲಾಖೆಗೂ ಹೆಚ್ಚಿನ ಸಂಬಂಧವಿದೆ. ಇವನ್ನು ಒಂದಕ್ಕೊಂದು ಅನುಕೂಲವಾಗುವರೀತಿಯಲ್ಲಿ ಉಪಯೋಗ ಮಾಡಿಕೊಳ್ಳುವುದು ಅವಶ್ಯಕ, ಈಗ ವ್ಯವಸಾಯ ಇಲಾಖೆಯ ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಹಕಾರ ಇಲಾಖೆ ಅತ್ಯಾವಶ್ಯಕ. ಹೆಚ್ಚು ಮುತುವರ್ಜಿಯಿಂದ ಕೆಲಸ ನಡೆಯುತ್ತಿದೆ. ಏಕೆಂದರೆ ಅಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಯಿತು, ಅಲ್ಲಿ ಹಾಗಾಯಿತು, ಇಲ್ಲಿ ಹೀಗಾಯಿತು ಎಂಬುವುದಾಗಿ ದಿನವಹಿ ಕೇಳುತ್ತಿದ್ದೇವೆ. ಇವೆಲ್ಲಾ ಸರಿಹೋಗುವಂತೆ ಮಾಡತಕ್ಕವರು ಯಾರು ? It is a peoples' movement. It is our movement. ನಾವು ಮಾಡುವವರು. ಮುಖ್ಯವಾಗಿ ಸೊಸೈಟಿ ಸದಸ್ಯರುಗಳು ಸತ್ಯವಾಗಿರಬೇಕು ; ಆಗ ಸೊಸೈಟಿಗಳೂಸಹ ಚೆನ್ನಾಗಿರುತ್ತವೆ. ಉದಾಹರಣೆಗೆ ಹೇಳುವುದಾದರೆ Sri Narasimhan is also pleased to register a Co-operative Society. ಈ ಬಗ್ಗೆ ಸರ್ಕಾರದವರು ಇಂಟರ್‌ಫಿಯರ್ ಮಾಡಿದರೆ ಕೆಲಸ ಇನ್ನೂ ಚೆನ್ನಾಗಿ ನಡೆಯುತ್ತದೆ. ಆದರೆ ಇವರಲ್ಲಿ ಕಂಟ್ರೋಲ್ ಇಲ್ಲವೆಂದು ಹೇಳುತ್ತೇನೆ. ಒಟ್ಟಿನಲ್ಲಿ ಇತ್ತೀಚೆಗೆ ಕೋ-ಆಪರೇಟಿವ್ ಇಲಾಖೆಯಲ್ಲಿ ಸಾಕಷ್ಟು ಪ್ರೋಗ್ರೆಸ್ ನಡೆಯುತ್ತಿದೆ. ಈ ಇಲಾಖೆಯಲ್ಲಿ ಸಾಮಾನ್ಯ ಮನುಷ್ಯನಾಗಿ ಕೆಲಸಮಾಡುವವನಿಗೆ ತಕ್ಕ ಸಾಕರ್ಯಗಳನ್ನು ಕಲ್ಪಿಸಲು ಹಿಂದೆ ಹಳೆಯ ಮೈಸೂರಿನಲ್ಲಿ ಜಿಲ್ಲಾ ಬ್ಯಾಂಕು ಎಂಬುದಾಗಿ ಹೊಸದಾಗಿ ಸ್ಥಾಪನೆಮಾಡಿತ್ತು. ಅಲ್ಲಿನ ರಿಕಾರ್ಡ್ಸ್ ನೋಡಿದರೆ ಬಹಳ ಚೆನ್ನಾಗಿ ಪ್ರೋಗ್ರೆಸ್ ಮಾಡಿದ್ದಾರೆ. ಕಲೆಕ್ಷನ್ ದೃಷ್ಟಿಯಿಂದ ಮತ್ತು ಹಣ ಕೊಡುವ ದೃಷ್ಟಿಯಿಂದ ಹೆಚ್ಚಿನ ಪ್ರೋಗ್ರೆಸ್ ಮಾಡಿದ್ದಾರೆ. ಲಾಂಗ್ ಟರ್ಮ್ ಲೋನಿಗಾಗಿ ಸೆಂಟ್ರಲ್ ಮಾರ್ಟ್‌ಗೇಜ್ ಬ್ಯಾಂಕಿನವರೂ ಸಹ ಹೆಚ್ಚಿಗೆ ಹಣ ಕೊಟ್ಟಿದ್ದಾರೆ.

Sri M. C. NARASIMHAN.—It must reach the poor agriculturists.

Sri G. SIVAPPA.—For everything Sri Narasimhan takes the name of the people. He speaks in the name of the people. So this applies to him more than to us. ಮುಖ್ಯವಾಗಿ ದೇಶದಲ್ಲಿ ಬೆಳೆ ಉತ್ಕೃಷ್ಟವಾಗಿ ಆಗಬೇಕು. ಆ ಒಂದು ಭದ್ರತೆ ಯಾವಾಗಲೂ ಇರಬೇಕು.

ಹೀಗೆ ಈ ಸಹಕಾರ ಇಲಾಖೆಯು ನಾನಾ ದೃಷ್ಟಿಗಳಿಂದ ಕೆಲಸಮಾಡುತ್ತಿದೆ. ಆದರೆ ಇನ್ನು ಮುಂದಕ್ಕೆ ಸರ್ಕಾರದವರು ಈ ಸರ್ವಿಸ್ ಕೋ-ಅಪರೇಟೀವ್‌ಗಳನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಆದರೆ ಮಾನವನಲ್ಲಿ ಒಂದಲ್ಲ ಒಂದು ದೋಷವಿದ್ದೇ ಇರುತ್ತೆ. ಯಾವ ಕಾಲದಲ್ಲೂ ಈ ಹಣದ ದುರುಪಯೋಗವಿದ್ದೇ ಇತ್ತು. ಹಣ ದುರುಪಯೋಗವಾಗುತ್ತೆಂಬ ನೆಪದಮೇಲೆ ಈ ಕಾರ್ಯವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಈ ಸಹಕಾರದ ಇಲಾಖೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲ ಸಮಾಡಬೇಕಾಗಿರುತ್ತೆಂದು ಒಂದು ಮಾತನ್ನು ಹೇಳಿದರೆ ಸಾಕು.

ಇನ್ನು ವ್ಯವಸಾಯದ ಇಲಾಖೆಯ ವಿಚಾರಕ್ಕೆ ಬಂದರೆ, ಈ ಇಲಾಖೆಯು ರೈತರಿಗೆ ಒದಗಿಸಬೇಕಾಗಿರುವ ಗೊಬ್ಬರದ ವಿಚಾರವಾಗಿ ಸರ್ಕಾರದವರು ನಮ್ಮ ದೇಶದಲ್ಲೊಂದು ದೊಡ್ಡ ಫರ್ಟಿಲೈಜರು-ಫ್ಯಾಕ್ಟರಿಯನ್ನು ಪ್ರಾರಂಭಿಸುವುದರಲ್ಲಿದ್ದಾರೆಂಬ ವರ್ತಮಾನವನ್ನು ನಾನು ಪತ್ರಿಕೆಗಳ ಮುಖೇನ ತಿಳಿಯುತ್ತಿದ್ದೇವೆ. ಆದರೆ ಆ ಫ್ಯಾಕ್ಟರಿಯನ್ನು ಎಲ್ಲಿ, ಯಾವಾಗ ಹಾಕುತ್ತಾರೆ, ಅದಕ್ಕೆ ಹಾಕತಕ್ಕ ಬಂಡವಾಳವೆಷ್ಟು ಎಂಬ ಈ ವಿವರಗಳೊಂದೂ ನಮಗಿನ್ನೂ ಸರಿಯಾಗಿ ಗೊತ್ತಾಗಿರುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿಗೆಪ್ರಯತ್ನ ನಡೆಸಬೇಕಾಗಿದೆ. ಆದರೆ ಈಗ ಸರ್ಕಾರದವರು ಈ ಫರ್ಟಿಲೈಜರ್ ವಿಚಾರವಾಗಿ ಜನರಿಗೇನೂ ಪ್ರಚಾರ ಮಾಡತಕ್ಕ ಅವಶ್ಯಕತೆಯಿಲ್ಲ. ಜನರು ಜಾಗರೂಕರಾಗಿದ್ದಾರೆ. ಈಗಾಗಲೇ ಈ ವಿಚಾರ ಸಾಕಷ್ಟು ಪ್ರಚಾರಕ್ಕೆ ಬಂದಿದೆ. ಆದರೆ ಈದಿವಸ ನಮ್ಮದೇಶಕ್ಕೆ ಸಾಕಾಗುವಷ್ಟು ಅಮೋನಿಯಂ ಮತ್ತು ಸೂಪರ್ ಫಾಸ್ಫೇಟ್ ದೊರೆಯುತ್ತಿಲ್ಲ. ನಮಗೆ ಸರಬರಾಯಾಗುತ್ತಿರುವ ಕೋಟ ಬಹಳ ಕಡಮೆಯಿರುತ್ತೆ. ಈ ವಿಚಾರದಲ್ಲಿ ಇಲಾಖೆಯವರ ಪ್ರಚಾರವೇ ಬೇಕಾಗಿಲ್ಲ. ಜನರೇ ಇದರ ಪ್ರಯೋಜನವೇನೆಂಬುದನ್ನು ಇತ್ತೀಚೆಗೆ ಕಂಡುಕೊಂಡಿದ್ದಾರೆ. ವ್ಯವಸಾಯದಲ್ಲಿ ಅಭಿರುಚಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಹೀಗಿರುವಾಗ ಸರ್ಕಾರದವರು ಪ್ರಾರಂಭಿಸಬೇಕೆಂದಿರುವ ಆ ಫರ್ಟಿಲೈಜರ್ ಫ್ಯಾಕ್ಟರಿಯೇನು, ಆ ಸಿಂಧ್ರಿ ಕಾರ್ಖಾನೆಯಷ್ಟೇ ದೊಡ್ಡದೇ, ಅಥವ ಚಿಕ್ಕದೇ, ಅದನ್ನೆಲ್ಲಿ ಸ್ಥಾಪಿಸುತ್ತಾರೆ, ಯಾವಾಗ ಸ್ಥಾಪನೆಮಾಡುತ್ತಾರೆ ಎಂಬುದೊಂದೂ ಗೊತ್ತಿಲ್ಲ. ಸುಮ್ಮನೆ ನಾವು ಪತ್ರಿಕೆಗಳಲ್ಲಿ ಪ್ರಾರಂಭವಾಗುತ್ತೆ, ಪ್ರಾರಂಭವಾಗುತ್ತೆ ಎಂದು ಹೇಳುತ್ತಿರುವುದನ್ನು ಮಾತ್ರನೋಡುತ್ತಿದ್ದೇವೆ. ಸರ್ಕಾರದವರು ಈ ಕಾರ್ಖಾನೆಯನ್ನು ಕೂಡಲೇ ಪ್ರಾರಂಭಿಸಬೇಕೆಂದು ಹೇಳುತ್ತೇನೆ.

ಇನ್ನು ಕೆಲವು ಮಾನ್ಯಸದಸ್ಯರು ಟ್ರಾಕ್ಟರ್ ಮತ್ತು ಬುಲ್-ಡೋಜರುಗಳ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಈ ಹಿಂದೆ ಇವುಗಳನ್ನು

(ಶ್ರೀ ಜಿ. ಶಿವಪ್ಪ)

ಇಲಾಖೆಯವರೇ ಇಟ್ಟುಕೊಂಡು 70-80 ಲಕ್ಷ ರೂಪಾಯಿಗಳನ್ನು ಲುಕ್ಸಾನು ಮಾಡಿಕೊಂಡಿದ್ದಾರೆ. ಹಿಂದೇನೋ ಇದು ಪ್ರಚಾರಕ್ಕೆ ಬರಲೆಂಬ ಉದ್ದೇಶದಿಂದಲೋ ಏನೋ ಆಗ ಎಕರೆಬಂದಕ್ಕೆ 4,5,6, ರೂಪಾಯಿಗಳಂತೆ ಛಾರ್ಜ್‌ಮಾಡುತ್ತಿದ್ದರು. ಈಗ ಇದು ಸಾಕಷ್ಟು ಜನರಲ್ಲಿ ಪಾಪುಲರೈಜ್ ಆಗಿದೆ. ಈ ಮೆಷೀನಗಳಲ್ಲಿ ಪ್ರತಿಯೊಂದು ಬಾಬನ್ನೂ ಸರಿಪಡಿಸಲು ಮತ್ತು ಎಣ್ಣೆ ಇತ್ಯಾದಿಗಳನು ಉಪಯೋಗಿಸಲು ಮನುಷ್ಯನ ಕೈವಾಡ ಇದ್ದೇ ಇರಬೇಕು. ಇದರಿಂದು ಸಾಮಾನುಗಳ ಗೈರುವಿಲೆಗೂ ಮತ್ತು ಸಾಮಾನುಗಳನ್ನು ಅಪಹರಿಸುವುದಕ್ಕೂ ಇದರಲ್ಲಿ ಹೆಚ್ಚಿನ ಅವಕಾಶ ಇದೆ. ನಮ್ಮಲ್ಲಿ ಅಂಥ ದೊಡ್ಡ ದೊಡ್ಡ ವ್ಯವಸಾಯಗಾರರು ಯಾರೂ ಇರುವುದಿಲ್ಲ. ಎಲ್ಲೂ 60-70 ಎಕರೆಗಳ ಕೆಳಗಿರತಕ್ಕ ಜನರೇ ಜಾಸ್ತಿ. ಇಂಥ ಚಿಕ್ಕಪುಟ್ಟ ರೈತರ ಉಪಯೋಗಕ್ಕೆ ಅನುಕೂಲವಾಗಿರುವಂಥ ಚಿಕ್ಕ ಚಿಕ್ಕ ಟ್ರಾಕ್ಟರುಗಳನ್ನು ಮಾಡಲು ಸಾಧ್ಯವಿಲ್ಲವೇ ಎಂಬುದನ್ನು ಇಲಾಖೆಯವರು ಪರಿಶೀಲಿಸಬೇಕಾದ್ದು ಅಗತ್ಯ. ಈ ವಿಚಾರಕ್ಕೂ ಸರ್ಕಾರ ಕೂಡಲೆ ಗಮನ ಕೊಡಬೇಕು.

ನಮ್ಮ ದೇಶದಲ್ಲಿ ಅನೇಕ ಯೋಜನೆಗಳು ವ್ಯವಸಾಯೋದ್ಯಮದಬಗ್ಗೆ ಜಾರಿಯಲ್ಲಿ ಬಂದಿರುತ್ತವೆ. ಕಾಟನ್ ಸಮಿತಿ, ಇಂಡಿಯನ್ ಆಯಿಲ್, ಬೀಜದ ಸಮಿತಿ, ಷುಗರ್‌ಕೇನ್ ಸಮಿತಿ ಇತ್ಯಾದಿ ಸಮಿತಿಗಳು ಅನೇಕ ಸ್ಕೀಂಗಳಬಗ್ಗೆ ಕೆಲಸಮಾಡುತ್ತಿವೆ. ಆದರೆ ಇಂಥ ಯಾವ ಒಂದು ಸ್ಕೀಮೂ ಈಗ ನಮ್ಮ ಮೈಸೂರಿನಲ್ಲಿ ಪ್ರಾರಂಭವಾಗಿಲ್ಲ. ಇತರ ರಾಜ್ಯಗಳು ಹೆಚ್ಚಿನ ಅನುಕೂಲವನ್ನು ಈ ಹಾದಿಯಲ್ಲಿ ಪಡೆಯುತ್ತಿರುವಾಗ ನಮ್ಮ ಮೈಸೂರಿನವರು ಸುಮ್ಮನೆ ಇರುವುದು ಸರಿಯಲ್ಲ. ಈ ವಿಚಾರಕ್ಕೆ ಮಂತ್ರಿಗಳು ಕೂಡಲೆ ಗಮನ ಕೊಡಬೇಕು. ಆದರೆ ಈ ವಿಚಾರದಲ್ಲಿ ಹಣಕಾಸಿನ ಮಂತ್ರಿಗಳಿಂದ ಅಡ್ಡಿಯಾಗುತ್ತದೆಯೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಸೆಕ್ರಟೇರಿಯೆಟ್ ಲೆವಲ್‌ನಲ್ಲಿ ಅಡ್ಡಿ ಬರುತ್ತಿದೆಯೆಂದು ಹೇಳುತ್ತಿದ್ದಾರೆ. The Schemes are held up in the Finance Department or in the Secretariat ಎಂದು ಹೇಳುತ್ತಿದ್ದಾರೆ. ಹೀಗಾಗಿ ಈ ಸ್ಕೀಂಗಳು ಅಲ್ಲಲ್ಲೇ ನಿಂತುಹೋಗಿ ಕೇಂದ್ರದ ಧನಸಹಾಯ ನಮಗೆ ತಪ್ಪಿತು. ಈ ವಿಚಾರವನ್ನು ಈ ಹಿಂದೆಯೂ ಸಹ ನಾನು ಸರ್ಕಾರದವರ ಗಮನಕ್ಕೆ ತಂದಿದ್ದೆನು. ನಾವು ಸುಮಾರು 16-17 ಸಾವಿರ ಖರ್ಚು ಮಾಡಿದರೆ ಕೇಂದ್ರದವರು ಶೇಕಡ 75–80 ಸಾವಿರ ಕೊಡುತ್ತಾರೆ. ಹೀಗೆ ನಾವು ಶೇಕಡ 20 ಹಣ ಖರ್ಚುಮಾಡಲು ಹಿಂದೆ ಮುಂದೆ ನೋಡುತ್ತ ಶೇಕಡ 80 ರಷ್ಟು ವರಮಾನ ಹಾಳು ಮಾಡಿ ಕೊಂಡಿರುತ್ತೇವೆ ಸರ್ಕಾರದವರು ಈಗಲಾದರೂ ಈ ವಿಚಾರದಲ್ಲಿ ತೀವ್ರವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The Congress Party has taken almost the whole of the time allotted to it. The P.S.P. has taken 10 minutes more. I have to give 20 minutes to the Independents.

Sri G. N. PUTTANNA.—I request you, Sir, to extend the time for this demand by one more day. Anyway, I leave it to the Leader.

6 P.M.

Mr. SPEAKER.—It is better we stick up to the time. I have alloted 20 days for Financial business and on the 20th day, I will have to put all the demands to guillotine. On this condition, I will agree to the proposal.

ಶ್ರೀ ಕೆ. ಎಲ್. ನರಸಿಂಹಯ್ಯ.—ಒಂದು ದಿನ ಮುಂದುವರಿಸಿ ಎಂದು ನಾನು ಹೇಳುತ್ತೇನೆ.

†**Sri B. D. JATTI** (Chief Minister).—Sir, I feel that some of the Hon'ble Members have to speak on subjects. It is not good to discuss one or two subjects and put the rest to guillotine. Even to-day, the time was divided between all the political parties—Independents, P.S.P. and Congress. It was agreed in the beginning itself that this arrangement should be carried out. Having agreed and having accepted it, we must follow it We must follow the principles that we have once accepted in the House.

Mr. SPEAKER.—So, Sri V. S. Patil will speak for ten minutes and then Sri Narayanaswami will also get some time. I request Sri Patil to speak only for ten minutes.

†**Sri V. S. PATIL** (Belgaum I).—Sir, I will deal with only three points within the time allotted to me, that is agriculture, forest and co-operation. Sir, as the time is very short, I will have to be very brief in my remarks.

So far as the Agricultural Department is concerned, the main point is whether we have succeeded in producing more food. That is the only thing which we have to see. We have got so many schemes and so many departmental men working in this Department. What is the result of it ? The Grow-More-Food scheme was started somewhere in 1948 and at that time, our esteemed Prime Minister was pleased to give us an assurance that no foodgrains will be imported after 1951. But what is the result ? The result is quite the reverse. We have to import foodgrains to feed our masses every year in increasing quantities. Why ? That point has to be considered by this Government. The main reason for the failure of the grow more food scheme of the Agricultural Department is that

the schemes have not reached the actual cultivator at all. Moneys sent from Delhi come to these people and they come up to the taluk headquarters, but they never reach the villagers. The money dries up at that stage and the actual cultivator never gets it. That is the whole trouble and that is why our schemes for grow-more-food has become a complete failure.

Secondly Sir, so far as Grow-More-Food is concerned, there must be proper fertilisers and what is the way in which our Government is distributing it ? They are distributing through the so-called co-operative societies. You will find Sir, that the actual cultivator never gets the fertiliser in time. I have pointed out these instances to our Hon'ble Minister when he had come to our place and pointed out how effective is the system of distribution of fertilisers. Fertilisers are sold only by these co-operative societies to the cultivator, but in actual practice, these fertilisers go to the black-market and they are sold in blackmarket openly for double the price. That is the way Government is distributing essential things and Government is not taking any steps though matters are brought to the notice of concerned officers to check up how these materials go into black market.

This is the way in which this Department is working or may I say, is not working at all ? It is in the hands of the black marketers and that is why this scheme of grow more food has become a complete failure.

Then Sir, the next Department is our Forest Department. So far as the present Minister is concerned, he is an old friend of mine. He has studied this science himself but the result is rather disappointing. We are more concerned with the increase in food, increase in resources of the forest and increase in the living standards of our people. Every one knows Sir, that the forest is being depleted every year and I am afraid that after a lapse of say 20 to 25 years, it will be rather difficult for us to say that in a particular region there was a forest. All these forest areas are likely to be rendered treeless in future. The road side trees that were planted during the British regime, were intact so long as Britishers were ruling the country. What has happened to these trees now ? For every tree, only the stem remains there and all the branches are removed. I do not know whether it is due to the independence being felt by the villagers or people think they have a right to remove government trees without any regard for anything. That may be one of the reasons. But I can definitely say, Sir, that it is slackness on the part of the Forest Department to allow such illegal cutting and removing of trees. Even the officers themselves are parties to this ; and I have come across several examples wherein these forest officers participate or give false permits to the villagers to cut trees and remove then illegally and unless this is stopped, I think Sir, that there will be great or irreparable loss to our country.

Sir, the last Department to which I would like to refer is Co-operation. So far as co-operation is concerned Sir, we either have to sail or sink with this Department because the policies of our country as enunciated by our Prime Minister, is that we have to live in future on a co-operative basis. In every field, he is trying to bring co-operation or co-operative societies. What is the state of affairs of this Department at present ? To quote a few instances in our district, in Sankeswar, Hukeri, and in the same taluk, at Pachapur, there were big co-operative banks. In this one taluk, where no one else except the Congress can enter, there are Congress people who are always supported, what is the condition of these co-operative banks or societies ? In all these three banks, there are misappropriations of huge sums of money. Government knows this and they have also answered it on the floor of this House as well as in the Bombay Assembly. Lakhs of rupees have been misappropriated by these Thasildars ; but unfortunately or fortunately, they have their heads protected by the white caps and the Government cannot do anything. Even in this House, an answer was given to my question that some lakhs of rupees have been misappropriated in Sankeswar Society.

(SRI V. S. PATIL)

What was the result? The result is nothing. Persons who have misappropriated these sums of money, are still leaders in the Congress Party.

If this is to go on, I do not think we can ever hope to base the future of our country on a co-operative basis. Just look at the grow more food campaign started by our Prime Minister. The same fate awaits the co-operative movement started by him. Whatever his good intentions may be, the actual work is such that they always take the benefit to themselves and allow the whole country to go to dogs. That is the attitude. It is the attitude that is being shown by these people and that is why there is absolutely no future so far as co-operation is concerned.

One more thing which I would like to say is we have demanded lands from the people of the four villages which are to be submerged in the Rakascope scheme. These lands are in the Forest Department. I had already referred to that and requested the Minister to come and settle this immediately. But it was not possible for the Minister to come there. Those people are lying idle there without any work. In today's newspaper "The Mail" it has been published that proposals to State Governments have been sent in the matter of powers of Panchayats to run the works programme. A high priority in this scheme is given to the suggestion by the Planning Commission that State Governments should examine the possibility of compulsory contribution of labour in villages on a bigger scale than at present. So, while the Planning Commission is now considering to give more employment opportunities to the people. In the villages that I referred to, people are idling their time. That is the reason why I asked the Government to give them lands for increasing food production. But our Government is so sluggish that they have no time to give their thought and solve this problem. Looking at all these things, it is doubtful whether the Government will ever succeed in agriculture or forest or co-operation. Unless they give up their sluggish attitude for the uplift of this country, it is not possible.

Thank you.

†ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಸ್ವಾಮಿ, ವ್ಯವಸಾಯದ ಮುಖ್ಯ ಉದ್ದೇಶ ಹೆಚ್ಚು ಆಹಾರ ಬೆಳೆಯುವುದು ಮತ್ತು ಬೆಳೆಯುವವನಿಗೆ ಆದಾಯ ಹೆಚ್ಚುವುದು. ಈ ಎರಡು ಉದ್ದೇಶಗಳ ಸಾಧನೆಯಲ್ಲಿಯೂ ಕಳೆದ ಹನ್ನೆರಡು ವರ್ಷಗಳಲ್ಲಿ ಸರ್ಕಾರ ವಿಫಲವಾಗಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ನನ್ನ ಮಿತ್ರರನೇಕರು ಹೆಚ್ಚು ಆಹಾರ ಬೆಳೆಯುವ ವಿಷಯವನ್ನು ಹೇಳಿದ್ದಾರೆ; ಆದಕಾರಣ ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ನಮ್ಮ ಸಂಸ್ಥಾನದ ವಿಚಾರದಲ್ಲಿ ಹೇಳುವುದಾದರೆ, ಸುಮಾರು ಸಂಸ್ಥಾನದ ಅರ್ಧ ಪ್ರದೇಶದಲ್ಲಿ ಸದಾ ಕಾಲದಲ್ಲಿಯೂ ಅಭಾವ ಪ್ರಾಪ್ತವಾಗುವ ಕಾರಣ, ಕೇವಲ ಅರ್ಧ ಪ್ರದೇಶದಲ್ಲಿ ಆಹಾರ ಬೆಳೆದು ರಾಜ್ಯದ ಎರಡು ಕೋಟಿ ಜನರಿಗೆ ಕೊಡಬೇಕಾಗಿದೆ. ಸರ್ಕಾರ ಈ ಪರಿಸ್ಥಿತಿಯನ್ನರಿತಿಲ್ಲ. ಏಕೆಂದರೆ, ಈ ಕಷ್ಟವನ್ನು ತಪ್ಪಿಸಲು ಯಾವ ಸೂಕ್ತ ಕಾರ್ಯಕ್ರಮವನ್ನೂ ಸರ್ಕಾರ ಕೈಗೊಂಡಿಲ್ಲ. ಹೆಚ್ಚಿನ ಆಹಾರ ಬೆಳೆಯುವುದಕ್ಕಾಗಿ ನೀರಾವರಿ ಕಾಮಗಾರಿಗಳಿಗಾಗಿ ಹೆಚ್ಚು ಖರ್ಚಾದರೂ ಪ್ರಕೃತಿಯ ಕೃಪೆಯಿಲ್ಲದೆ ಮಳೆ ಬಾರದೇ ಹೋದರೆ ಪ್ರಯೋಜನವಾಗುವುದಿಲ್ಲ, ಆದುದರಿಂದ ಸಂದರ್ಭವೊದಗಿದಾಗಲೆಲ್ಲ ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಮಾಡುತ್ತಿದ್ದೇನೆ. ಅದೇನೆಂದರೆ, ಅಭಾವ ಪ್ರದೇಶದಲ್ಲಿ ನೀರಾವರಿಗಾಗಿ ಸಾಕಷ್ಟು ಬಾವಿಗಳನ್ನು ತಗೆಸಲು ಸಾಲದ ರೂಪದಲ್ಲಿ ರೈತರಿಗೆ ಹೆಚ್ಚು ಹಣ ಕೊಡಿ ಎಂದು ಹೇಳಿದ್ದೇನೆ. ಇದಕ್ಕೆ ಎಳ್ಳಷ್ಟೂ ಗಮನ ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. ಸರ್ಕಾರದವರು ಕಣ್ಣಾರೆ ಕಾಣುವುದಿಲ್ಲ, ಕಿವಿಯಾರೆ ಕೇಳುವುದಿಲ್ಲ. ಕಣ್ಣು ಕಿವಿ ಇಲ್ಲದೆ ಸರ್ಕಾರ ಆಡಳಿತ ನಡೆಸುತ್ತಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಸ್ವಾಮಿ, ಎಷ್ಟೇ ಯೋಜನೆಗಳನ್ನು ಸರ್ಕಾರ ತಯಾರು ಮಾಡಿದರೂ ರೈತನಿಗೆ ಮುಖ್ಯವಾಗಿ ಬೇಕಾದ ಸೌಕರ್ಯ ಭೂಮಿ ಮತ್ತು ನೀರು. ಈ ಎರಡಕ್ಕೂ ಅಭಾವವಿರುವಾಗ ರೈತ ಹೇಗೆ ಬೆಳೆದು ಬದುಕಬಲ್ಲ? ಅವನಿಗೆ ತಕ್ಕಷ್ಟಾದರೂ ಆದಾಯ ಬಂದರೆ ಆ ಕಸಬನ್ನವಲಂಬಿಸುತ್ತಾನೆ. ತಾನು ದುಡಿದು, ತಾನೂ ತಿಂದು ದೇಶಕ್ಕೂ ಆಹಾರವನ್ನೊದಗಿಸಬಲ್ಲನು. ಆದರೆ ಈಗಿರುವ ಪರಿಸ್ಥಿತಿಯನ್ನು ನೋಡಿದರೆ, ಕೆಲವರಿಗೆ ಒಂದೆರಡು ಎಕರೆ ಭೂಮಿಯನ್ನು ಕೊಡುತ್ತಿದ್ದಾರೆ; ಇನ್ನೂ ಅನೇಕರು ತಮಗೆ ಅಷ್ಟೂ ಇಲ್ಲವೆಂದು ಪರಿತಪಿಸುತ್ತಿದ್ದಾರೆ. ಸರ್ಕಾರ ಈ ವಿಷಯದಲ್ಲಿ ಯಾವ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ನಾವು ಕೇಳಿದರೆ, ಭೂಮಿಯನ್ನು ಕೊಡುತ್ತಿದ್ದೇವೆಂದು ಜಂಬಕ್ಕಾಗಿ ಹೇಳಿಕೊಳ್ಳಬಹುದು. ಆದರೆ ತಾಲ್ಲೂಕು ಕಚೇರಿಗಳಲ್ಲಿ ಭೂಮಿಯನ್ನು ಬೇಡಿ ಹಾಕಿಕೊಂಡ ಅರ್ಜಿಗಳು ಎಷ್ಟೋ ಬಾಕಿ ಬಿದ್ದಿವೆ. ಅಲ್ಲಿ ಆಡಳಿತ ನಡೆಸುವ ಅಧಿಕಾರಿಗಳಿಗೂ ಕೂಡ ಏನು ಮಾಡಬೇಕೆಂಬುದು ಗೊತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ರೈತ ಹೆಚ್ಚು ಬೆಳೆದು ದೇಶಕ್ಕೆ ಒದಗಿಸುವುದು ಹೇಗೆ ಸಾಧ್ಯ? ರೈತನ ಆದಾಯ ಹೆಚ್ಚಬೇಕೆಂದು ಹೇಳುತ್ತ, ಪ್ಲಾನಿಂಗ್ ಕಮಿಷನ್ ಲೆಕ್ಕಾಚಾರದ ಪ್ರಕಾರ ಶೇಕಡ 5 ರಷ್ಟು ಆದಾಯ ಹೆಚ್ಚಿದೆಯೆಂದು ಹೇಳುತ್ತಿದ್ದಾರೆ. ಆದರೆ ವಾಸ್ತವಿಕ ಸ್ಥಿತಿಯನ್ನು ನೋಡಿದರೆ, ಅನೇಕರು ತಮ್ಮ ನಿತ್ಯ ಜೀವನದ ಖರ್ಚನ್ನು ಸರಿತೂಗಿಸುವುದಕ್ಕೂ

ಸಾಧ್ಯವಾಗದೆ ಇದ್ದಾರೆ. ಹೀಗಿರುವಾಗ ಅವರು ಏನು ತಾನೆ ಉಳಿಸುವುದಕ್ಕೆ ಸಾಧ್ಯ? ರಾಷ್ಟ್ರೀಯ ಉಳಿತಾಯ ಯೋಜನೆಗೆ ನಿಜವಾಗಿ ಅಲ್ಪ ಸ್ವಲ್ಪ ಸಂಪಾದನೆ ಮಾಡಿ ಜೀವನ ಸಾಗಿಸುತ್ತಿರುವ ರೈತನಿಂದ ಹಣವೇನೂ ಬರುತ್ತಿಲ್ಲ. ಸರ್ಕಾರದ ಅಧಿಕಾರಿಗಳ ಒತ್ತಾಯದಿಂದ ಶ್ರೀಮಂತರಿಂದ ಬರುತ್ತಿದೆ. ಈಗಿರತಕ್ಕ ಹಣದ ಉಬ್ಬರ ಅಥವ ಉಲ್ಬಣವನ್ನು ಕಡಮೆ ಮಾಡಬೇಕೆಂದು ಕ್ರಮಕೈಗೊಂಡಿರುವುದರಲ್ಲಿ ರಾಜ್ಯಸರ್ಕಾರದ ಸಹಾಯ ಎಳ್ಳಷ್ಟೂ ಇಲ್ಲ. ರೈತನ ಪರಿಸ್ಥಿತಿ ಉತ್ತಮಗೊಂಡು ದೇಶಕ್ಕೆ ಹೆಚ್ಚು ಅಹಾರ ಬೆಳೆಯ ಬೇಕಾದರೆ, ನೀರಾವರಿ ಅನುಕೂಲಕ್ಕೆ, ನಾನು ಹೇಳಿದ ಹಾಗೆ ಬಾವಿಗಳಿಗೆ ಹೆಚ್ಚು ಹಣ ಸಹಾಯ ಕಲ್ಪಿಸಬೇಕೆಂದು ವಿನಂತಿ ಮಾಡುತ್ತೇನೆ.

ಕೃತಕ ಗೊಬ್ಬರ ಇತ್ಯಾದಿ ವ್ಯವಸಾಯಕ್ಕೆ ಸಂಬಂಧಪಟ್ಟ ಸಾಮುಗ್ರಿಗಳ ವಿಷಯದಲ್ಲಿ ಇತರರು ಹೇಳಿದ್ದಾರೆ, ನಾನು ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ಆದರೂ ಈ ಬಗ್ಗೆ ಕೊರತೆ ಇದೆ. ಸಹಕಾರದ ಉದ್ದೇಶ ಸಾಧುವಾದುದು, ಹೆಸರೂ ಬಹಳ ಚೆನ್ನಾಗಿದೆ. ಆದರೆ ನಡೆಯುತಕ್ಕ ಆಡಳಿತ ಹೇಗಿದೆಯೆಂಬುದನ್ನು ನೋಡಿದರೆ ವ್ಯಸನವಾಗುತ್ತದೆ. Plough points ಸಹಕಾರ ಸಂಘಗಳಿಗೆ ಬಂದಿರುವುದು ಕಾಳಸಂತೆಯ ವ್ಯಾಪಾರಕ್ಕೆ ಹೋಗುತ್ತಿದೆ. ಅಧಿಕಾರಿಗಳು ಮಾತನಾಡುವುದಿಲ್ಲ. ರೈತ ಪೋಲೀಸ್ ಕೆಲಸ ಮಾಡಿ ಎಷ್ಟುತಾನೆ ಕಂಡು ಹಿಡಿಯಲು ಸಾಧ್ಯ? ಸಹಕಾರ ಸಂಘಗಳನ್ನು ಮಾಡಿ ಖಾಸಗಿಯವರ ಆಡಳಿತಕ್ಕೆ ಬಿಟ್ಟಿದ್ದಾರೆ. ಸರ್ಕಾರ ಕೈಹಾಕಬಾರದೆಂಬುದನ್ನು ಒಪ್ಪುತ್ತೇನೆ. ಆದರೆ ಸಹಕಾರ ಸಂಘಗಳ ಆಡಳಿತ ಸರಿಯಾಗಿ ನಡೆಯುತ್ತದೆಯೇ ಅಥವಾ ಇಲ್ಲವೆ ಎನ್ನುವುದನ್ನು ನೋಡಬೇಕಾದವರು ಯಾರು? ಒಟ್ಟಿನಲ್ಲಿ ಈಗಿರತಕ್ಕ ವ್ಯವಸ್ಥೆ ಚೆನ್ನಾಗಿಲ್ಲ. ರೈತನಿಗೆ ಬೇಕಾದ ಸಾಮಾನುಗಳು ಅವನಿಗೆ ಸರಿಯಾಗಿ ಒದಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಹೆಚ್ಚು ಆಹಾರ ಬೆಳೆಯಲು ಕೇವಲ ರೈತನಾದವನೊಬ್ಬನೇ ಹೊಣೆಯಾಗಿರಬಾರದು. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿದ್ದಾರೆ, ಮಿಲ್ ಮಾಲೀಕರಿದ್ದಾರೆ; ಇವರಲ್ಲಿ ಕೆಲಸ ಮಾಡುವ ಸಹಸ್ರಾರು ಮಂದಿ ಕಾರ್ಮಿಕರಿದ್ದಾರೆ. ಈ ಕೈಗಾರಿಕೆಗಳಲ್ಲಿರುವ ಕಾರ್ಮಿಕರಿಗೆ ವೈದ್ಯ ಸಹಾಯ, ವಸತಿ ಸೌಕರ್ಯ ಮುಂತಾದುವನ್ನು ಒದಗಿಸಲು ಕಾನೂನು ಮಾಡಿದ್ದಾರೆ. ಇಲ್ಲಿಯ ಕೂಲಿಗಾರನ ಜೀವನವನ್ನೂ ಹಳ್ಳಿಯ ರೈತನ ಜೀವನವನ್ನೂ ಹೋಲಿಸಿದರೆ ಅಜಗಜಾಂತರ! ರೈತ ತಾನು ದುಡಿದು ದೇಶಕ್ಕೆ ಆಹಾರವನ್ನು ಒದಗಿಸಿಕೊಟ್ಟು ತಾನು ಏನೂ ಇಲ್ಲದ ಸನ್ಯಾಸಿಯಾಗಿದ್ದಾನೆ. ಅದೇ ಮಿಲ್ ಕೂಲಿಗಾರರು ಎಲ್ಲ ಸೌಕರ್ಯಗಳನ್ನೂ ಅನುಭವಿಸುತ್ತ ಸುಖವಾಗಿದ್ದಾರೆ. ಇದು ಸರಿಯಲ್ಲ ಇದನ್ನು ತಪ್ಪಿಸಬೇಕು. ದೇಶಕ್ಕೆ ಆಹಾರ ಬೆಳೆಯುವವನ ವಿಚಾರದಲ್ಲಿ ಹೆಚ್ಚು ದಯೆ, ಕನಿಕರವಿರಬೇಕು. ಲಾಭದಾಯಕವಲ್ಲದ ವ್ಯವಸಾಯವನ್ನು ಒಂದು ತರಗತಿಯ ಜನರು ಮಾಡುತ್ತಾ ಮತ್ತೆ ಕೆಲವರು ಬೇರೆ/ ಉದ್ಯಮಗಳಲ್ಲಿ ಕೆಲಸಮಾಡಿ ಲಾಭಗಳಿಸಿ ಸುಖಪಡುವುದನ್ನು ತಪ್ಪಿಸಬೇಕು. ಮಿಲ್ ಮಾಲೀಕರು ಅವರ ಕಾರ್ಮಿಕರಿಗೆ ಬೇಕಾದ ಆಹಾರವನ್ನು ಉತ್ಪತ್ತಿ ಮಾಡಬೇಕೇ ವಿನಾ ರೈತರೇಕೆ ಮಾಡಬೇಕು? ಬಿನ್ನಿಮಿಲ್, ಚಿನ್ನದಗಣಿ, ಮುಂತಾದ ಕೈಗಾರಿಕೆಯವರಿಗೆ ತುಂಗಭದ್ರ ಇಂಥಾ ಕಡೆ ಸಹಸ್ರಾರು ಎಕರೆ ಜಮೀನಿರುವಲ್ಲಿ ಜಮೀನು ಕೊಟ್ಟು ಅವರ ಸಿಬ್ಬಂದಿಗೆ ಬೇಕಾದ ಆಹಾರವನ್ನು ಬೆಳೆಯುವಂತೆ ಮಾಡಿದರೆ, ರೈತನ ಮೇಲಿರುವ ಹೊರೆ ತಪ್ಪುವುದಲ್ಲದೆ, ಇವರಿಗೆ ಅಗತ್ಯವಾದ ಆಹಾರವೂ ದೊರಕುತ್ತದೆ.

ಸರ್ಕಾರಕ್ಕೂ ಕೂಡ ಉತ್ಪತ್ತಿ ಬರುತ್ತದೆ. ಮಿಲ್ ಮಾಲೀಕರು ಸ್ವಂತವಾಗಿ ಮಾಡಬೇಕು. ಇದರಿಂದ ತೊಂದರೆ ಏನೂ ಇಲ್ಲ. ಈ ರೀತಿ ಅಲ್ಲದೆ ಕೇವಲ ಹಳ್ಳಿಗಾರರೇ ನಮಗೆ ಬೆಳೆದು ಕೊಡಬೇಕೆಂದರೆ ಅದು ಅವರ ಅಪ್ರತ್ಯಕ್ಷ ಶೋಷಣೆ ಎಂದೇ ಹೇಳಬೇಕಾಗುತ್ತದೆ. ಸರ್ಕಾರದವರು ದಯೆಯಿಟ್ಟು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು.

ಎರಡನೆಯದಾಗಿ ಅರಣ್ಯ ಇಲಾಖೆ. ಸ್ವಾಮಿ, ಈ ವಿಚಾರದಲ್ಲಿ ಹೇಳುವುದಾದರೆ ಅರಣ್ಯಗಳು ಅನೇಕವಾಗಿ ನಶಿಸಿಹೋಗಿ ಅದರ ಕಡೆ ಕಣ್ಣು ತೆರೆಯುವ ಪರಿಸ್ಥಿತಿ ಅರಣ್ಯ ನಶಿಸುವ ಪರಿಸ್ಥಿತಿ ಬಂದಮೇಲೆ, ಮಳೆ ಬಂದಿದೆ. ಬರುವುದು ಕಡಮೆ ಎಂದು ಶಾಸ್ತ್ರಜ್ಞರು ಹೇಳುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಅದೂ ಅಲ್ಲದೆ ಅರಣ್ಯದಲ್ಲಿ ಬೆಳೆದಿರತಕ್ಕ ಮರಗಳಿಂದ ಉತ್ಪತ್ತಿ ಹೆಚ್ಚಾಗಿ ಬರುತ್ತಿದೆಯೇ ಖರ್ಚಿಗೆ ಅನುಗುಣವಾಗಿ ಲಾಭ ಬರುತ್ತಿದೆಯೇ ಎಂದರೆ, ಇಲ್ಲ ಎಂದು ಧೈರ್ಯವಾಗಿ ಹೇಳಬಹುದು.

ನಮ್ಮ ಕೋಲಾರ ಜಿಲ್ಲೆಯಲ್ಲಿ ಯೂಕಲಿಪ್ಟಸ್ ಗಿಡ ಸೌದೆಗಾಗಿ ಬರುತ್ತಿದೆ. ಅಲ್ಲಿಯ ಭೂಮಿಯಿಂದ ಕ್ಯಾಶ್ಯೂನಟ್ ಬೆಳೆಯುವುದಕ್ಕೆ ಬೇಕಾದಷ್ಟು ಸೌಕರ್ಯವಿದೆ, ಅವಕಾಶವಿದೆ. ಹುಣಿಸೆಹಣ್ಣು ಬೆಳೆಯುವುದಕ್ಕೂ ಅವಕಾಶವಿದೆ; ಇದರಿಂದ ಬಹಳ ಉತ್ಪತ್ತಿ ಬರುತ್ತದೆ. ಅಂಥದನ್ನು negligible ಆಗಿ ಏನೋ ನೆಪಮಾತ್ರಕ್ಕೆ ಮಾಡುತ್ತಾ ಇದ್ದಾರೆಯೇ ಹೊರತು ಹೆಚ್ಚಾಗಿ ಮಾಡುತ್ತಾ ಇಲ್ಲ. ಆರ್ಥಿಕ ಆದಾಯವನ್ನು ಹೆಚ್ಚು ಮಾಡುವುದಕ್ಕೆ ಏನು ಕಾರ್ಯಗಳನ್ನು ಮಾಡಬೇಕೋ, ಏನು ವಿಧಾನವನ್ನು ಅನುಸರಿಸಬೇಕೋ, ಅದನ್ನು ಫಾರೆಸ್ಟ್ ಇಲಾಖೆಯವರು ಅನುಸರಿಸುತ್ತಿಲ್ಲ. ಕ್ಯಾಶ್ಯೂನೆಟ್ ಬೆಳೆವಣಿಗೆಗೆ ನಮ್ಮ ಸಂಸ್ಥಾನದಲ್ಲಿ ಹಾಸನ ಡಿಸ್ಟ್ರಿಕ್ಟಿಗೆ ಕೊಟ್ಟಿರುವ ಸೌಕರ್ಯವನ್ನು ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಿಗೆ ಒದಗಿಸಿಲ್ಲ. ಈ ವಿಷಯವನ್ನು ಅನೇಕ ಸಲ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆದರೆ ನಮ್ಮ ಮೇಲೆ ದಯೆಬರಲಿಲ್ಲ ಎಂದು ಹೇಳಬೇಕಾಗಿದೆ.

ಸ್ಯಾಂಡಲ್‌ವುಡ್ ಸ್ಮಗ್ಲಿಂಗ್ ಬಹಳವಾಗಿ ನಡೆಯುತ್ತಿದೆ. ನಿಂತೇಇಲ್ಲ. ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಗೆ ಉತ್ಸಾಹವಿಲ್ಲ. ಏಕೆಂದರೆ ಏನಾದರೂ ವಿಪತ್ತು ಒದಗಿದರೆ, ಪ್ರಾಣ ಹೋದರೆ, ಅವರನ್ನು ಸರ್ಕಾರ ನೋಡಿಕೊಳ್ಳುವುದಿಲ್ಲ. ಕೈಬಿಟ್ಟುಬಿಡುತ್ತಾರೆಂಬ ಹೆದರಿಕೆ ಅವರಿಗಿದೆ. ಒಂದು ನಿದರ್ಶನ ಕೊಡುತ್ತೇನೆ. ಸುಮಾರು ಎರಡು ವರ್ಷಗಳ ಕೆಳಗೆ ಶ್ರೀನಿವಾಸಪುರದಲ್ಲಿ ಒಬ್ಬ ಫಾರೆಸ್ಟ್ ಗಾರ್ಡ್ ನಿಶಿ ರಾತ್ರಿಯಲ್ಲಿ ಸೌದೆಯನ್ನು ಕದ್ದುಕೊಂಡು ಹೋಗುತ್ತಿದ್ದ ಯಾವುದೋ ಲಾರಿಯನ್ನು ತಡೆಯುವುದಕ್ಕೆ ಪ್ರಯತ್ನಪಟ್ಟು ತನ್ನ ಪ್ರಾಣವನ್ನು ಕಳೆದುಕೊಂಡನು. ಅವನ ಹೆಸರು ನಾರಪ್ಪ ಎಂದು. ಅವನಿಗೆ ಹೆಂಡತಿ, ಇಬ್ಬರು ಮಕ್ಕಳು ಇದ್ದಾರೆ. ಎರಡು ವರ್ಷವಾಯಿತು. ನಾನು ಅನೇಕ ಪತ್ರಗಳನ್ನು ಬರೆದೇ ಮೂರು ಸಲ ಮಂತ್ರಿವರ್ಯರನ್ನೂ ಭೇಟಿ ಮಾಡಿದೆ. ಬೇಡಿಕೊಂಡೆ, ಈ ವರೆಗೂ ಕಾಂಪೆನ್ಸೇಶನ್ ಕೊಟ್ಟಿಲ್ಲ. ಸಣ್ಣ ಪುಟ್ಟ ನೌಕರರ ವಿಚಾರದಲ್ಲಿ ಈ ಇಲಾಖೆಯವರು ಎಷ್ಟು ನಿರ್ದಯರಾಗಿದ್ದಾರೆ! ಹೀಗಿದ್ದರೆ ಸಿಬ್ಬಂದಿವರ್ಗದವರು ಸಂತೋಷದಿಂದ ಹೇಗೆ ಕೆಲಸಮಾಡುತ್ತಾರೆ? ಇಷ್ಟು ನಿರ್ದಯದ ಆಡಳಿತ, ಕರುಣಹೀನತ್ವ ಜಗತ್ತಿ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ನಲ್ಲ ಎಲ್ಲಿಯೂ ಇರವುದಿಲ್ಲವೆಂದು ವಿಷಾದದಿಂದ ಹೇಳ ಬೇಕಾಗಿದೆ. ಸಂಬಂಧಪಟ್ಟ ಮಂತ್ರಿಗಳನ್ನು ಮೂರು ಸಲ ನಾನು ಅಪ್ರೋಚ್ ಮಾಡಿ ಕೇಳಿಕೊಂಡಿದ್ದೇನೆ, ಈ ನತದೃಷ್ಟನ ಮೇಲೆ ದಯೆಬರಲಿಲ್ಲ. ಇವನ ಧೈರ್ಯಕ್ಕೆ, ಸಾಹಸಕ್ಕೆ ಮತ್ತು ಕರ್ತವ್ಯನಿಷ್ಠೆಗೆ ಮೆಚ್ಚಿ ಒಂದು ಬಹುಮಾನ ಕೊಡಿ ಎಂದು ಹೇಳಿದೆ, ಇವತ್ತಿಗೂ ಮಾಡಿಲ್ಲ. ಮಂತ್ರಿಗಳು ಏನು ಉತ್ತರ ಹೇಳುತ್ತಾರೋ ನಾನು ಕಾಣೆ. ಈರೀತಿಯಿಂದ ಆಡಳಿತ ನಡೆಸಿದರೆ ಸಿಬ್ಬಂದಿಗೆ ಧೈರ್ಯವಿರುತ್ತದೆಯೆ? ನೂರಾರು ಮೈಲಿ ಇರುವ ಪ್ರದೇಶದಲ್ಲಿ ಒಬ್ಬನೊಬ್ಬ ಫಾರೆಸ್ಟ್ ಗಾರ್ಡ್ ನೋಡಬೇಕಾಗುತ್ತದೆ. ಅವನಿಗೆ ವಿಪತ್ತು ಬಂದರೆ, ಅದನ್ನು ನೋಡತಕ್ಕ ದಕ್ಷತೆ ಇಲ್ಲ, ದಿದ್ದರೆ, ಇದು ನಿಜವಾದ ಆಡಳಿತವೆ? ಇದರಿಂದ, ಸಿಬ್ಬಂದಿಗೆ ಧೈರ್ಯ ಒದಗುತ್ತದೆಯೇ? ಇಲ್ಲ. ಈ ವಿಷಯವನ್ನು ಸರ್ಕಾರದವರು ಬಹಳ ಮಟ್ಟಿಗೆ ಗಮನಿಸಿ ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಅನಂತರ ವೆಟೆರಿನೆರಿ (ಪಶು ಪಾಲನೆ) ಇಲಾಖೆ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಮೊದಲು ತಾಲ್ಲೂಕಿಗೆ ಒಂದೊಂದು ಆಸ್ಪತ್ರೆ ಇರುತ್ತಿತ್ತು. ಈಗ ಎರಡೆರಡು ಮಾಡುತ್ತಾಇದ್ದಾರೆ. ನಮ್ಮ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ವಿಚಾರ ಹೇಳಬೇಕಾದರೆ, ಸುಮಾರು ಒಂದು ಲಕ್ಷ ಪ್ರಜಾಸಂಖ್ಯೆ ಇರುವುದರಿಂದ, ಅದರ ಎರಡರಷ್ಟು, ಎಂದರೆ, ಎರಡುಲಕ್ಷ ಜಾನುವಾರು ಇದೆ. ಒಂದೇ ಆಸ್ಪತ್ರೆ ಇದೆ. ಮೊನ್ನೆ ತಾನೆ ಒಂದು ಪ್ರಶ್ನೆಗೆ ಉತ್ತರ ಕೊಟ್ಟಾಗ ಮಾನ್ಯ ಮಂತ್ರಿಗಳು, ಸಿಬ್ಬಂದಿ ಇಲ್ಲದ ಕಾರಣ ತಡವಾಯಿತು ಎಂದು ಹೇಳಿದರು. 1947ನೆಯ ಇಸವಿಯಲ್ಲಿಯೇ ಮಾನ್ಯ ಅರ್ಥಿಕ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಎಲಿಯೂರು ಗ್ರಾಮಕ್ಕೆ ದಯಮಾಡಿಸಿ 13 ವರ್ಷವಾಯಿತು, ಕಟ್ಟಡ ಕಟ್ಟುತ್ತೇವೆ. ಪಂಚಾಯಿತಿಯವರು ತಮ್ಮ ಕೋಟ ಕೊಡುತ್ತಾರೆಂದು ಹೇಳಿದ್ದೆವು, ಈ ವರೆಗೂ ಒಂದು ಆಸ್ಪತ್ರೆ ಕೊಟ್ಟಿಲ್ಲವೆಂದು ಹೇಳಿದರೆ ನಿಜವಾಗಿ ಸಂತೋಷಪಡುತ್ತೀರಾ? ಹೀಗೆಯೇ ಪ್ರತಿಯೊಂದು ಹೋಬಳಿ ಹೆಡ್‌ಕ್ವಾರ್ಟರಿಗೂ ಕೇಳುತ್ತಿದ್ದೇವೆ.

ಕುರಿ ಸಾಕುವುದಕ್ಕೆ, ಸೌಕರ್ಯ ಕೊಡಿ ಎಂದರೆ, ಡಿಸ್ಟ್ರಿಕ್ಟಿಗೆಲ್ಲಾ ಒಂದೆರಡು ಕಡೆ ಕೊಡುತ್ತೇವೆ, ಬೇರೆ ಕಡೆ ಕೊಡುವುದಿಲ್ಲವೆಂದು ಹೇಳುತ್ತಾರೆ. ರೈತನ ಉದ್ಧಾರ ನಿಜವಾಗಿ ಆಗಬೇಕಾದರೆ, ಅನುಕೂಲ ಮಾಡಿ ಕೊಡಬೇಕು. ಅವರನ್ನು ತೃಣೀಕರಿಸಬೇಡಿ, ಅವನಿಗೆ ಅನುಕೂಲ ಮಾಡಿಕೊಡಿ ಎಂದು ಹೇಳುತ್ತೇನೆ.

ಸಹಕಾರ ಇಲಾಖೆಯ ಹೆಸರು ಬಹಳ ಚೆನ್ನಾಗಿದೆ. ಸಹಕಾರ ಬಹಳ ಚೆನ್ನಾಗಿದೆ!—ಯಾರಲ್ಲಿ ಎಂದರೆ, ಸೊಸೈಟಿಗಳ ಆಡಳಿತ ನಡೆಸಿಕೊಂಡಿರುವವರಲ್ಲಿ ಕಳ್ಳವ್ಯಾಪಾರ ಮಾಡಿಕೊಡುವವರಲ್ಲಿ ಮತ್ತು ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಸಹಕಾರ ಬಹಳ ಚೆನ್ನಾಗಿದೆ! ಮೆಚ್ಚಬೇಕಾಗಿದೆ! ಈ ಮಾತನ್ನು ಹೇಳಬೇಕಾದರೆ ನಿಷ್ಠೆಯಿಂದ ಕೆಲಸಮಾಡತಕ್ಕ ಸಹಕಾರ ಸಂಸ್ಥೆಗಳ ಆಡಳಿತಗಾರರಿಗೆ ನನ್ನ ಧನ್ಯವಾದಗಳು. ಅವರ ವಿಷಯ ನಾನು ಹೇಳುತ್ತಾ ಇಲ್ಲ. ಈ ಮಾತನ್ನು ಹೇಳಿದರೆ ಮಾನ್ಯ ಮಂತ್ರಿಗಳ ಮನಸ್ಸಿಗೆ ಖೇದವಾಗಬಹುದು. ಸರ್ಕಾರದ ಲೋಪ ಬಹಳವಿದೆ. ಸಹಕಾರ ಸಂಸ್ಥೆಗಳಿಗೆ ಸದಸ್ಯರನ್ನು ನಾಮಿನೇಟ್ ಮಾಡುವ ಅವಕಾಶವಿದೆ. ನಾಮಿನೇಟ್ ಮಾಡುತ್ತಾರೆ. ಈ ಹೆಸರುಗಳು ಎಲ್ಲಿಂದ ಬರುತ್ತವೆ? ಪರಮೇಶ್ವರನಿಗೇ ಗೊತ್ತಾಗುವುದಿಲ್ಲ! ಇವತ್ತು ಹೆಸರು ಬೇಕಾದರೆ ಕೊಡುತ್ತೇನೆ; ಅವರ ವಿಚಾರದಲ್ಲಿ ಪೋಲೀಸ್ ರಿಪೋರ್ಟು ತರಿಸಿಕೊಳ್ಳಿ. ಪೋಲೀಸಿನವರು ಇವರ ವಿಚಾರವಾಗಿ ಸರಿ ಎಂದು ಹೇಳಿಬಿಟ್ಟರೆ, ಬಹಿರಂಗವಾಗಿ ಕ್ಷಮಾಪಣೆ ಬೇಡುತ್ತೇನೆ. ಗ್ರಾಮದವರಲ್ಲಿ ಮನೆ ಇಲ್ಲ, ಮಠ ಇಲ್ಲ; ಅಂಥವರನ್ನು ಸೊಸೈಟಿಯ ಡೈರೆಕ್ಟರಾಗಿ, ಆಡಳಿತಗಾರರನ್ನಾಗಿ ಮಾಡಿ, ಅವರಿಗೆ ಸಹಸ್ರಾರು ರೂಪಾಯಿ ಖರ್ಚುಮಾಡುವ ಅವಕಾಶ ಕೊಡುತ್ತಾರೆ. ಏನು ಅನ್ಯಾಯ? ಒಂದು ಸಂಸ್ಥೆಗೆ ಇಲಾಖೆಯ ಎಕ್ಸ್-ಅಫಿಶಿಯೋ ಮೆಂಬರುಗಳಿರುತ್ತಾರೆ. ಈವರೆಗೂ ಯಾವ ಮೆಂಬರೂ ಒಂದು ಮೀಟಿಂಗ್ ಅಟೆಂಡ್ ಮಾಡಿರಬೇಕಲ್ಲ! ಈ ಸಂಸ್ಥೆಯಲ್ಲಿ ನಾನೂ ಒಬ್ಬ ಡೈರೆಕ್ಟರು. ರೆಕಾರ್ಡ್ ಕೂಡ ಮಾಡಿಸಿದ್ದೇನೆ. ಕೇಳುವವರು ಯಾರು? ಬಾರಾ ಖೂನ್ ಮಾಫ್! ದೊಡ್ಡ ಮನುಷ್ಯರು: ಆದರೆ ಇದರಿಂದ ಸಹಕಾರ ಸಂಸ್ಥೆಗಳು ಹಾಳಾಗಿಹೋಗುತ್ತವೆ.

ಹರಿಜನರಿಗೆ ಕೈಗಾರಿಕೆ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರದವರು ಆಜ್ಞೆ ಹೊರಡಿಸಿದರು. ಅದನ್ನು ಅನುಸರಿಸಿ ರಾಣೂರು ಎಂಬ ಒಂದು ಗ್ರಾಮದಲ್ಲಿ ಸೊಸೈಟಿ ಇನ್‌ಸ್ಪೆಕ್ಟರು ಹರಿಜನ ಬಾಂಧವರನ್ನು ಸೇರಿಸಿ 20-25 ಷೇರು ಕೂಡಿಸಿದರು. ಇವತ್ತಿಗೆ ಆರು ತಿಂಗಳುಗಳಾದವು; ಸೊಸೈಟಿ ರಿಜಿಸ್ಟರ್ ಮಾಡಿದ್ದಾರೆಯೆ! ನ್ಯಾಶನಲ್ ಎಕ್ಸ್‌ಟೆನ್‌ಶನ್ ಸ್ಕೀಮ್ ಆಫೀಸರನ್ನು ಕೇಳಿದ್ದಕ್ಕೆ, ಅವರು ಅದಕ್ಕೂ ನನಗೂ ಸಂಬಂಧವಿಲ್ಲ, ಅದು ನನ್ನ ಕಾರ್ಯವಲ್ಲವೆಂದರು. ಇದು ಅಸೆಂಬ್ಲಿ ಮೆಂಬರು ಕೇಳಿದರೆ ಬರತಕ್ಕ ಉತ್ತರ. ಈ ಮಧ್ಯೆ ವಸೂಲು ಮಾಡಿದ ಹಣವನ್ನು ಒಬ್ಬ ದೊಡ್ಡ ಮನುಷ್ಯರ ವಶದಲ್ಲಿ ಇಟ್ಟಿದ್ದಾರೆ; ಅವರು ನನ್ನ ಹತ್ತಿರ ಏಕೆ ಹಣ, ವಾಪಸುಮಾಡುತ್ತೇನೆಂದು ಹೇಳುತ್ತಿದ್ದಾರೆ. ನಾವು ನಿಮ್ಮಲ್ಲಿಯೇ ಸ್ವಲ್ಪದಿವಸ ಇಟ್ಟುಕೊಂಡಿರಿ ಎಂದು ಹೇಳುತ್ತಿದ್ದೇವೆ. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಿಗೆ ಈ ರೀತಿಯಾಗಿ ಹೇಳಿದೆ, ಇದಕ್ಕೆ ಯಾರು ಯಾರು ಜವಾಬ್ದಾರರು ಗೊತ್ತಿಲ್ಲವೇ, ನಿಮ್ಮ ಜವಾಬ್ದಾರಿಯನ್ನು ಇಷ್ಟು ಕಾಲವೂ ಅರತು ಕೊಂಡಿಲ್ಲವೇ, ಎಂದು ಕೇಳಿ ಇಷ್ಟು ಮಾಡಿದ ನಂತರ ಇದು ಎಕ್ಸ್‌ಟೆನ್‌ಶನ್ ಆಫೀಸರ ಕರ್ತವ್ಯವೆಂದು ತಿಳಿದುಕೊಂಡರು. ಆ ಆಫೀಸರು ಬೆಂಗಳೂರಿನಲ್ಲಿ ಸಿಕ್ಕಿದರು, ಏನು ಮಾಡಿದಿರಿ ಎಂದು ಕೇಳಿದಾಗ, ನನ್ನದೇ ಎಂದು ತೀರ್ಮಾನವಾಗಿದೆ, ರಿಜಿಸ್ಟರ್ ಮಾಡುವುದಕ್ಕೆ ಬಂದಿದ್ದೆ, ಫಾರಮ್ಮುಗಳು ಇಲ್ಲವೆಂದು ಹೇಳಿದರು. ಎರಡು ತಿಂಗಳಾಗಿದೆ, ಇವತ್ತಿಗೂ ಆಗಿಲ್ಲ. ಸಂತೋಷಪಡೋಣವೇ? ಇದು ಹರಿಜನರ ಉದ್ಧಾರಕಾರ್ಯವೇ? ಇದು ರಾಚಯ್ಯನವರ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ರಾಚಯ್ಯನವರ ಅಸಮಾಧಾನಕ್ಕೆ ಈ ರೀತಿ ಮಾಡುತ್ತಿದ್ದೇನೆಂದು ಅವರು ತಿಳಿದುಕೊಳ್ಳುವುದಿಲ್ಲವೆಂದು ನನ್ನ ನಂಬಿಕೆ.

Sri M. MALLIKARJUNASWAMY.—That is the type of training we have given to these Extension Officers!

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸ್ವಾಮಿ, ನನ್ನ ಕಾನ್‌ಸ್ಟಿಟ್ಯುಯನ್ಸಿಯಲ್ಲಿ, ಕೋಲಾರ ಜಿಲ್ಲೆಯಲ್ಲಿ ತೋರದೇವನಹಳ್ಳಿ ಎಂಬ ಕಡೆ ಒಂದು ಸೊಸೈಟಿ ಇದೆ. ಅಲ್ಲಿ ಒಂದು ಆಯಿಲ್ ಪಂಪ್ ಕೂಡ ಇಲ್ಲದೆ ಒಬ್ಬರು ಸುಳ್ಳು ರಿಕಾರ್ಡ್ ಮಾಡಿಸಿ 50-60 ಸಾವಿರ

ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ. ಮಾನ್ಯ ಮಂತ್ರಿಗಳಿಗೂ ಹೇಳಿದೆ. ಬಡವರಿಗೆ ಉಪಕಾರವಾಗುತ್ತಿಲ್ಲ, ಅವರ ಕೊಲೆಗೆ ಅನುಕೂಲವಾಗುತ್ತಿದೆ. ದರೋಡೆಯಾಗುತ್ತಿದೆ ಸ್ವಾಮಿ! ಅಂಥವರನ್ನು ಏಕೆ ವಿಚಾರಣೆಗೆ ಗುರಿಪಡಿಸಬಾರದು? ಏಕೆ ಇಷ್ಟು ಹೇಳುತ್ತೇನೆಂದರೆ, ಸಹಕಾರ ತತ್ವ ಒಪ್ಪಿಕೊಂಡಿದ್ದೇವೆ, ಅದು ಚೆನ್ನಾಗಿ ನಡೆಯಬೇಕು, ಅದರಿಂದ ದೇಶಕ್ಕೆ ಒಳ್ಳೆಯದಾಗಬೇಕೆಂಬುದೇ ನಮ್ಮ ಬಯಕೆ. ಈ ರೀತಿ ಆಗುತ್ತಿಲ್ಲ. ಈ ನ್ಯೂನತೆಗಳನ್ನೆಲ್ಲಾ ಸರಿಪಡಿಸಿ, ತಮ್ಮವರು ಎಂಬ ಒಂದು ವ್ಯಾಮೋಹವನ್ನು ದೂರ್ಪಡಿಸಿ ಕೆಲಸ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಈ ರೀತಿ ಮಾಡಬೇಕು, ಎಂದು ಸರ್ಕಾರಕ್ಕೆ ಒಂದು ಸೂಚನೆಕೊಟ್ಟು ಇಷ್ಟು ಸಮಯ ಕೊಟ್ಟಂಥ ಸ್ಪೀಕರ್‌ರವರಿಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮೂರು ಮಂದಿ ಮಂತ್ರಿಗಳು ಮಾತನಾಡುತ್ತಾರೆ. ಅವರು $1\frac{1}{2}$ ಗಂಟೆ ಅಥವಾ 1 ಗಂಟೆ 40ನಿಮಿಷದಲ್ಲಿ ಮುಗಿಸುತ್ತಾರೆ.

It will be past 7-30 or 8 P.M. Tomorrow there will be no Question Hour because there are no sufficient number of replies. Shall we utilize that hour tomorrow and finish this? Shall we sit at 12 o'clock and take [this] up between 12 NOON and 2 P.M. and the other Demands after 2 P.M.? If you are all agreeable, we will sit at 12 o'clock tomorrow and go up to 2 P.M. discussing these demands; and then we will take up the other Demands.

The House now rises and will meet to-morrow at 12 NOON.

———

The House adjourned at Thirty Minutes past Six of the Clock to meet again at Twelve of the Clock on Tuesday, the 12th April 1960.

———